ಎಚ್.ಡಿ ಪದವಿಗಾಗಿ ಸಲ್ಲಿಸುವ ಸಂಶೋಧನಾ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧನಾ ವಿಷಯ

ಸುರಪುರ ಸಂಸ್ಥಾನದ ಸೈನಿಕ, ಆಡಳಿತ ಮತ್ತು ಕಂದಾಯ ವ್ಯವಸ್ಥೆ; ಒಂದು ಚಾರಿತ್ರಿಕ ಅಧ್ಯಯನ

(16ನೇ ಶತಮಾನದಿಂದ 19ನೇ ಶತಮಾನದವರೆಗೆ)

ಸಂಶೋಧನಾ ವಿದ್ಯಾರ್ಥಿ

ರಮೇಶ

ಇತಿಹಾಸ ಅಧ್ಯಯನ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ,

ಮಾರ್ಗದರ್ಶಕರು

ಡಾ. ಹನುಮ ನಾಯಕ

ನಿವೃತ್ತ ಪ್ರಾಧ್ಯಾಪಕರು

ಇತಿಹಾಸ ಅಧ್ಯಯನ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ,

ಇತಿಹಾಸ ಅಧ್ಯಯನ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ,–574199

ಡಿಸೆಂಬರ–2022

.

ಸುರಪುರ ಸಂಸ್ಥಾನದ ಸೈನಿಕ, ಆಡಳಿತ ಮತ್ತು ಕಂದಾಯ ವ್ಯವಸ್ಥೆ; ಒಂದು ಚಾರಿತ್ರಿಕ ಅಧ್ಯಯನ (16ನೇ ಶತಮಾನದಿಂದ 19ನೇ ಶತಮಾನದವರೆಗೆ)

ಸಾರಲೇಖ

ಪೀಠಿಕೆ :

ಪ್ರಾಚೀನ ಕಾಲದಿಂದ ಕರ್ನಾಟಕವನ್ನು ಆಳ್ವಿಕೆ ಮಾಡಿರುವಂತಹ ಹತ್ತು ಹಲವು ಮನೆತನಗಳಲ್ಲಿ ಗಂಗರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಅನಂತರದಲ್ಲಿ ವಿಜಯನಗರ ಸಾಮ್ರಾಜ್ಯ ಮತ್ತು ಬಹುಮನಿ ಸುಲ್ತಾನ ಅರಸರ ಇತಿಹಾಸವೆಂದು ನಂಬಿಕೊಂಡು ಬಂದಿದ್ದೇವೆ. ಆದರೆ ಈ ಪ್ರದೇಶಗಳಲ್ಲಿ ವಿಜಯನಗರದ ಸಾಮಂತರಾಗಿ ಆಳ್ವಿಕೆ ನಡೆಸಿದಂತಹ ಅನೇಕ ಸಣ್ಣ–ಪುಟ್ಟ ಸಂಸ್ಥಾನಗಳು ಆಡಳಿತ ನಡೆಸಿರುವುದನ್ನು ಕಾಣುತ್ತೇವೆ. ಅಂತಹ ಸಾಮಂತ ಮನೆತನಗಳು ಮಹಾ ಮಂಡಳೇಶ್ವರರಾಗಿ, ಪಾಳೆಯಗಾರರಾಗಿ, ಸೈನಿಕ ಸರದಾರರಾಗಿ ವಿಜಯನಗರದ ರಕ್ಷಣೆಗಾಗಿ ಆಯಾ ಪ್ರಾಂತಗಳಲ್ಲಿ ಆಳ್ವಿಕೆಯನ್ನು ನಡೆಸಿದ್ದಾರೆ.

ವಿಜಯನಗರದ ಅವನತಿಯ ಕಾಲಕ್ಕೆ ಅಂತಹ ಎಪ್ಪತ್ತೆಂಟು (78) ಪಾಳೆ ಪಟ್ಟುಗಳು ಶಾಹಿಗಳ ಆಕ್ರಮಣಗಳಿಂದ ವಿವಿಧ ಸ್ಥಳಗಳಲ್ಲಿ ಆಶ್ರಯವನ್ನು ಪಡೆದು ಅನಂತರದ ಕಾಲವಧಿಯಲ್ಲಿ ಸ್ವತಂತ್ರ ನಾಯಕರಾಗಿ ಆಳ್ವಿಕೆಯನ್ನು ಕೈಗೊಂಡಿರುವುದು ಸತ್ಯ ಸಂಗತಿಯಾಗುತ್ತದೆ. ವಿಜಯನಗರೋತ್ತರ ಕಾಲಕ್ಕೆ ಸ್ವತಂತ್ರ ಆಳ್ವಿಕೆಯನ್ನು ಕೈಗೊಂಡ ಮನೆತನಗಳಲ್ಲಿ ಸುರಪುರ ಸಂಸ್ಥಾನದ ನಾಯಕರ ಮನೆತನವು ಒಂದು. ಈ ನಾಯಕರು ಕ್ರಿ.ಶ.1630 ರಿಂದ 1857ರವರೆಗೆ ಕಕ್ಕೇರಿ, ನೀಲಕಂಠರಾಯನಗಡ್ಡಿ, ವಾಗಣಗೇರಿ, ವನದುರ್ಗ, ಸುರಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ತಮ್ಮ ಆಡಳಿತದ ಅವಧಿಯಲ್ಲಿ ನಿರ್ಮಿಸಿದ ಅರಮನೆಗಳನ್ನು, ಕೋಟೆಗಳನ್ನು, ಬೇಟೆಯ ಮಹಲ್‌ಗಳನ್ನು, ವೀರಗಲ್ಲುಗಳನ್ನು, ಕಾವಲು ಗೋಪುರಗಳನ್ನು, ಬ್ರಿಟಿಷ ಅಧಿಕಾರಿಗಳ ಭಂಗಲೆಗಳನ್ನು ಮತ್ತು ಸಮಾಧಿಗಳನ್ನು, ಕೆರೆಗಳನ್ನು, ದೇವಸ್ಥಾನಗಳನ್ನು, ಯುದ್ಧದ ಸಲಕರಣೆಗಳನ್ನು ನಿರ್ಮಿಸಿರುವುದು ಇವರ ಆಡಳಿತಕ್ಕೆ ಇಂದಿಗೂ ಆಧಾರ ಸ್ತಂಭಗಳಾಗಿವೆ. ಇಂತಹ ಕಾರಣಗಳಿಂದಲೇ ಸುರಪರು ನಾಯಕರ ಆಡಳಿತವು ಪ್ರಮುಖವಾಗುತ್ತದೆ. ಈ ಹಿನ್ನೆಲೆಯಲ್ಲಿ ಸುರಪುರ ಸಂಸ್ಥಾನದ ನಾಯಕರ ಕಾಲದ ಸೈನಿಕ, ಆಡಳಿತ ಮತ್ತು ಕಂದಾಯ ವ್ಯವಸ್ಥೆಯ

ಚಾರಿತ್ರಿಕ ಅಧ್ಯಯನವನ್ನು 16ನೆಯ ಶತಮಾನದಿಂದ 19ನೆಯ ಶತಮಾನದವರೆಗೆ ಈ ಮನೆತನದ ಪೂರ್ವಜರ ಆಡಳಿತದಿಂದ ಕಾಲಾನುಕ್ರಮಕ್ಕೆ ಅನುಗುಣವಾಗಿ ಅಧ್ಯಯನಕ್ಕೆ ಒಳಪಡಿಸಿರುತ್ತೇನೆ.

ಕ್ರಿ.ಶ.1566 ರಿಂದ ಕ್ರಿ.ಶ.1630ರವರೆಗೆ ನೀಲಕಂಠರಾಯನ ಗಡ್ಡಿ ಜೊತೆಗೆ ನಾಲ್ಕು ಪ್ರದೇಶಗಳ ನೆಲೆಗಳಲ್ಲಿ ಆಶ್ರಯವನ್ನು ಪಡೆದು ಆ ಭಾಗದಲ್ಲಿ ಸ್ವತಂತ್ರ ಸ್ಥಳೀಯ ಅರಸರಾಗಿ ಏಳಿಗೆಯನ್ನು ಹೊಂದುತ್ತಾರೆ. ಶಾಹಿ ಮನೆತನಗಳ ಆಕ್ರಮಣಕ್ಕೆ ತುತ್ತಾದ ಪ್ರದೇಶದ ಜನತೆಯ ಏಳಿಗೆಗಾಗಿ ಜನರನ್ನು ವಿಶ್ವಾಸಕ್ಕೆ ಒಳಪಡಿಸಿ ಸುಮಾರು ಅರವತ್ತೈದು **(65)** ವರ್ಷಗಳ ಕಾಲ ಕಕ್ಕೇರಿಯ ಸುತ್ತಮುತ್ತಲ್ಲಿನ ಪ್ರದೇಶವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿ ಸ್ಥಳೀಯ ನಾಯಕರಾಗಿ ಗುರುತಿಸಿಕೊಂಡರೆಂದು ತಿಳಿದುಬರುತ್ತದೆ. ಈ ಭಾಗದ ಜನರ ವಿಶ್ವಾಸಕ್ಕೆ ಪಾತ್ರರಾಗಿ ಸ್ಥಳೀಯ ಮಟ್ಟದ ಸಮಸ್ಯೆ (ನ್ಯಾಯ)ಗಳನ್ನು ಪರಿಹರಿಸುವ ಮೂಲಕ ಆ ಪ್ರದೇಶದ ಜನರ ನಂಬಿಕೆಗೆ ಪಾತ್ರರಾದರು. ಇಂತಹ ಕಾರ್ಯಗಳಿಂದ ವಿಜಯನಗರೋತ್ತರ ಕಾಲಕ್ಕೆ ತಮ್ಮ ಆಳ್ವಿಕೆಯನ್ನು ಮುಂದುವರಿಸಿದ ನಾಯಕರು ಸ್ಥಳೀಯವಾಗಿ ಆಡಳಿತವನ್ನು ವಿಸ್ತರಿಸಿಕೊಂಡು ಸಂಸ್ಥಾನವನ್ನು ಗಟ್ಟಿಗೊಳಿಸಿರುವುದನ್ನು ಕಾಣುತ್ತೇವೆ.

ನೀಲಕಂಠರಾಯನ ಗಡ್ಡಿ ಜೊತೆಗೆ ಕಕ್ಕೇರಿಯನ್ನು ಸು.ಕ್ರಿ.ಶ.1630ರವರೆಗೆ ನಾಯಕರು ತಮ್ಮ ಆಡಳಿತಕ್ಕೆ ಒಳಪಡಿಸಿದರೆಂಬುದನ್ನು ನಂಜುಂಡ ಕವಿಯ ರಾಮನಾಥ ಚರಿತೆಯಿಂದ ಮತ್ತು ಮರಾಠಿ ಕೈಫಿಯತುಗಳ ಆಧಾರಗಳಿಂದ ತಿಳಿದುಬರುತ್ತದೆ. ಇಂತಹ ಆಧಾರಗಳಿಂದ ಹೈದರಾಬಾದ್ ಕರ್ನಾಟಕದ ಭೀಮಾ ಮತ್ತು ಕೃಷ್ಣಾ ನದಿಗಳ ಮಧ್ಯದ ಪ್ರದೇಶದಲ್ಲಿ ಈ ನಾಯಕರ ಪೂರ್ವಜರ ಚರಿತ್ರೆಯು ಬಾದಷಹ, ಯೂಸುಫ ಆದಿಲ್‌ಷಾ ಅನಂತರ ಅಳಿಯ ರಾಮರಾಯನ ಕಾಲದವರೆಗೆ ಈ ಮನೆತನದ ಮೂಲ ಪುರುಷರ ಆಡಳಿತದಲ್ಲಿ ಸಂಬಂಧವಿರುವುದು ಸ್ಪಷ್ಟವಾಗುತ್ತದೆ. ಸಗರದುರ್ಗವನ್ನು ವಿಜಯಪುರ ಬಾದಶಹರಿಂದ ಪರಗಣೆಯ ಸ್ಥಳಗಳನ್ನು ಗೆದ್ದು ಅಳಿಯ ರಾಮರಾಯನು ಸಗರ ಸಂಕ್ರಮಣ ಧುರೀಣನೆಂದು ಕರೆಯಿಸಿಕೊಂಡ ಉಲ್ಲೆಖವು ಕಂಡುಬರುತ್ತದೆ. ಇದರಿಂದ ಪ್ರಸ್ತುತ ಕಂಡುಬರುವ ಸೇಡಂ ತಾಲ್ಲೂಕಿನ ಅಡಕಿ ಪರಗಣಿಯ ಜೊತೆಗೆ ಯಾತಗಿರಿಯ ಕೆಲವು (ಯಾದಗಿರಿ) ಸ್ಥಳಗಳು ಸುರಪುರ ನಾಯಕರ ಆಡಳಿತಕ್ಕೆ ಒಳಪಟ್ಟಿರುವುದು ಸ್ಪಷ್ಟವಾಗುತ್ತದೆ.

ವಿಜಯನಗರೋತ್ತರ ಕ್ರಿ.ಶ.1635ರ ಕಾಲದ ಆಡಳಿತದ ಅವಧಿಯಲ್ಲಿ ಸಗರನಾಡಿನ ಕೆಲವು ಪ್ರದೇಶಗಳು ಬಿಜಾಪುರ (ವಿಜಯಪುರ) ಸುಲ್ತಾನನ ಅಧೀನಕ್ಕೆ ಒಳಪಟ್ಟಿದ್ದವು. ಈ ಅವಧಿಯಲ್ಲಿ ಸ್ಥಳೀಯ ನಾಯಕನಾಗಿ ಜಕ್ಕಪ್ಪ ನಾಯಕನು ಸ್ವತಂತ್ರ ಆಡಳಿತವನ್ನು ನಡೆಸುತ್ತಿದ್ದನು. ಅನಂತರದ ಅವಧಿಯಲ್ಲಿ ಈತನ ಮಕ್ಕಳಾದ ರಾಜ ಗಡ್ಡಿಲಿಂಗನಾಯಕ ಮತ್ತು ರಾಜ ಗಡ್ಡಿಪಿಡ್ಡನಾಯಕರ ವಂಶಕ್ರಮವು

ಬೆಳೆದು ವಿಜಯಪುರ ಸುಲ್ತಾನನಿಂದ ಕೆಲವು ಇನಾಮು ಗ್ರಾಮಗಳನ್ನು ಪಡೆದು ವಾಗನಗೇರಿ ಕೋಟೆಯನ್ನು ನಿರ್ಮಿಸಿಕೊಂಡು ಎರಡರಿಂದ ಮೂರು **(2/3)** ತಲೆಮಾರಿನ ನಾಯಕರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವುದನ್ನು ಗುರುತಿಲಾಗಿದೆ.

ವಾಗಣಗೇರಿಯ (ಕರ್ಶಿಹಳ್ಳಿ) ಕೋಟೆಯನ್ನು ಮೊದಲನೆಯ ರಾಜಧಾನಿಯನ್ನಾಗಿ ನಿರ್ಮಿಸಿಕೊಂಡು ಆಳ್ವಿಕೆ ಮಾಡಿಂದತಹ ಮೊದಲನೆ ಅರಸ ರಾಜ ಗಡ್ಡಿಪಿಡ್ಡನಾಯಕನು ಕ್ರಿ.ಶ.1636 ರಿಂದ 1666ರವರೆಗೆ ಆಡಳಿತವನ್ನು ಮುನ್ನಡೆಸುತ್ತಾನೆ. ಅನಂತರ ಎರಡನೆ ಅರಸನಾಗಿ ರಾಜ ಹಸರಂಗಿ ಪಾಮನಾಯಕನು ಕ್ರಿ.ಶ.1666 ರಿಂದ 1688ರವರೆಗೆ ಆಡಳಿತವನ್ನು ಕೈಗೊಳ್ಳುತ್ತಾನೆ. ಮೂರನೆಯ ಅರಸನಾಗಿ ರಾಜ ಪೀತಾಂಬರ ಬಹರಿ ಪಿಡ್ಡನಾಯಕನು ಕ್ರಿ.ಶ.1687 ರಿಂದ 1726ರವರೆಗೆ ಆಳ್ವಿಕೆಯನ್ನು ನಡೆಸುತ್ತಾನೆ ಎಂಬುದನ್ನು ಕೈಫಿಯತ್ತು ನಂ.1/2/3 ಪ್ರತಿಗಳು ವಿವರಣೆಯನ್ನು ನೀಡುತ್ತವೆ. ಅಷ್ಟೇ ಅಲ್ಲದೆ ಬಾದಶಹರಿಂದ ರಾಜ ಗಡ್ಡಿಪಿಡ್ಡನಾಯಕನಿಗೆ ಕೊಡಲ್ಪಟ್ಟ ಒಟ್ಟು ಆರು (6) ಫಾರಸಿ ಸನ್ನದುಗಳನ್ನು ನಾವು ಇಲ್ಲಿ ಗಮನಿಸಿದಾಗ ಈ ಕೈಫಿಯತ್ತುಗಳ ಪ್ರಕಾರವು ಅರಸರ ಆಡಳಿತ ಕಾಲಘಟ್ಟವು ಸ್ಪಷ್ಟವಾಗುತ್ತದೆ. ಸ್ಥಳೀಯ ಆಡಳಿತದ ಪರಿಸ್ಥಿತಿಗಳನ್ನು ಸನ್ನದುಗಳೊಡನೆ ಹೋಲಿಸಿ ಪರ್ಯಾಲೋಚಿಸಿದರೆ ಸಂಸ್ಥಾನದ ನಾಯಕರ ಸೈನಿಕ ಆಳ್ವಿಕೆಯ ಜೊತೆಗೆ ಸೇವಾ ವರ್ಗದವರ ಕುರಿತು ಹಾಗೂ ಸಂಸ್ಥಾನದ ಕಂದಾಯ ವ್ಯವಸ್ಥೆಯ ಬಗೆಗೆ ಅನೇಕ ನಿಜಾಂಶಗಳು ತಿಳಿದುಬರುತ್ತವೆ. ಕ್ರಿ.ಶ.1636 ರಿಂದ 1858ರವರೆಗೆ ಸುಮಾರು 225 ವರ್ಷಗಳ ಕಾಲ 12/13 ಜನ ಪ್ರಸಿದ್ಧ ನಾಯಕರು ಆಡಳಿತವನ್ನು ನಡೆಸಿ ಇತಿಹಾಸ ಪುಟಗಳಲ್ಲಿ 16 ರಿಂದ 18ನೆಯ ಶತಮಾನದ ಉತ್ತರಾರ್ಧದರೆಗಿನ ಚರಿತ್ರೆಯು ಪ್ರಸಿದ್ಧವಾಗಿದೆ. ಕಾಲಾನುಕ್ರಮವಾಗಿ ನಾಯಕರ ಆಳ್ವಿಕೆ ಮತ್ತು ಸಂಸ್ಥಾನದ ಇತಿಹಾಸವನ್ನು ಕುರಿತು ಸಾಕಷ್ಟು ಸಂಶೋಧನ ಬರವಣಿಗೆಗಳನ್ನು ಮತ್ತು ಕೃತಿಗಳನ್ನು ಆಧಾರಗಳನ್ನಾಗಿ ಬಳಸಿಕೊಂಡು ಅಧ್ಯಯನಕ್ಕೆ ಒಳಪಡಿಸಿರುತ್ತೇನೆ.

ಭೌಗೋಳಿಕ ಹಿನ್ನೆಲೆ :

ಸಗರನಾಡು, ಹೈದ್ರಾಬಾದ್ ಕರ್ನಾಟಕ ಅನಂತರದಲ್ಲಿ ಕಲ್ಯಾಣ ಕರ್ನಾಟಕವೆಂದು ಕರೆಯಲ್ಪಡುವ ಈ ಭಾಗವು ಸುರಪುರ ದೋ–ಅಬ್ ಕೃಷ್ಣ ಮತ್ತು ಭೀಮಾ ನದಿಗಳ ಸಂಗಮವಾಗಿದೆ. ಈ ಪ್ರದೇಶವು ಕೊಕ್ಕಿನಾಕಾರದ ಭೂ ರಚನೆಯನ್ನು ಹೊಂದಿದ್ದು ಸುರಪುರ, ಶಹಾಪುರ, ಜೇವರ್ಗಿ ಮತ್ತು ಸಿಂದಗಿ ತಾಲ್ಲೂಕುಗಳಿಂದ ಕೂಡಿದೆ. ಕರ್ನಾಟಕ ರಾಜ್ಯದ ಯಾದಗಿರಿ ಜಿಲ್ಲೆಯು ನೈರುತ್ಯ ಭಾಗವನ್ನು ರೂಪಿಸುತ್ತದೆ. ಸಮನಾಂತರವಾಗಿ 76’–18 ಮತ್ತು 77’–18 ಪೂರ್ವ ರೇಖಾಂಶ ಮತ್ತು 16’–15 ಮತ್ತು 17’–12 ಉತ್ತರ ಅಕ್ಷಾಂಶಗಳ ನಡುವೆ ಹಬ್ಬಿದ್ದು ಸುಮಾರು 2,100 ಚದರ ಮೈಲಿಗಳಷ್ಟು (5,370–

ಚ,ಕಿ,ಮಿ) ಭೂ ಭಾಗವನ್ನು ವ್ಯಾಪಿಸುತ್ತದೆ. ಸುರಪುರ ಪಟ್ಟಣದಿಂದ ದಕ್ಷಿಣ ಭಾಗದಲ್ಲಿ ಕೃಷ್ಣಾ ನದಿ ಪಶ್ಚಿಮ ಭಾಗದಲ್ಲಿ ವಿಜಯಪುರ (ಬಿಜಾಪುರ)ಜಿಲ್ಲೆ ಹಾಗೂ ಪೂರ್ವ ಮತ್ತು ಉತ್ತರ ಭಾಗಗಳಲ್ಲಿ ಭೀಮಾ ನದಿಯಿಂದ ಆವರಿಸಲ್ಪಟ್ಟಿದೆ. ಈ ಪ್ರಾದೇಶಿಕ ಲಕ್ಷಣಗಳ ಆಧಾರದ ಮೇಲೆ 'ದೋ-ಅಬ್' ಪ್ರದೇಶವನ್ನು ನೈರುತ್ಯ, ಆಗ್ನೇಯ ಹಾಗೂ ಉತ್ತರ ವಲಯಗಳಾಗಿ ವಿಂಗಡಿಸಬಹುದು.

ನೈರುತ್ಯ ವಲಯದ ರೇಖೆಯು ಹೆಚ್ಚು ಕಡಿಮೆ ಸುರಪುರ ತಾಲ್ಲೂಕಿನಷ್ಟೆ ಹಬ್ಬಿದ್ದು, ಒರಟಾದ, ಪರ್ವತವಲಯ, ಪ್ರದೇಶವಾಗಿದ್ದು ಇದು ದ್ವೀಪದ 16,000 ಅಡಿ (488 ಮೀಟರ)ಗಳಷ್ಟು ಎತ್ತರದಲ್ಲಿದೆ. ಈ ಪ್ರದೇಶವು ದ್ವೀಪದ ಹವಳ ಗಟ್ಟಿಗಳಿಂದಾದ ವಾಯುವ್ಯ ಮತ್ತು ಆಗ್ನೇಯ ಪರ್ವತ ಶ್ರೇಣಿಗಳಿಂದ ಹಾದು ಹೋಗಲ್ಪಟ್ಟಿದೆ. ಈ ಪರ್ವತ ಶ್ರೇಣಿಗಳಲ್ಲಿ ಕಣ್ಣಿಗೆ ಎದ್ದು ಕಾಣುವ ಶ್ರೇಣಿಗಳೆಂದರೆ, ನಾರಾಯಣಪುರ, ಹುಣಸಗಿ, ಹಳಬಾವಿ, ಸುರಪುರ ಮತ್ತು ಶಹಾಪುರ ಈ ಪ್ರದೇಶಗಳು ಸಮುದ್ರ ಮಟ್ಟದಿಂದ 1750 ರಿಂದ 1900 (154-580)ಮೀ,ಗಳಷ್ಟು ಎತ್ತರವಾಗಿಯು ನೆಲ ಮಟ್ಟದಿಂದ ಗರಿಷ್ಟ 500 ಅಡಿ (153)ಮೀ,ಗಳಷ್ಟು ಎತ್ತರವಾಗಿವೆ.

ಈ ಪ್ರದೇಶವು ಬಿಜಾಪುರದ ಆದಿಲ್ ಷಾಹಿ ಸುಲ್ತಾನರ ಪ್ರಸಿದ್ಧ ಕೋಟೆಗಳಿಗೆ ಆಶ್ರಯವನ್ನು ಒದಗಿಸಿವೆ. ಆಗ್ನೆಯ ವಲಯವು ಶಹಾಪುರದ ಮತ್ತು ಸುರಪುರದ ಪರ್ವತಗಳ ಪೂರ್ವ ಭಾಗವನ್ನು ಒಳಗೊಳ್ಳುತ್ತದೆ. ಈ ಭೂಪ್ರದೇಶವು ಉದ್ದ ಮತ್ತು ತಗ್ಗುಗಳಿಂದ ಕೂಡಿದ್ದು ಭೀಮಾ ಮತ್ತು ಕೃಷ್ಣಾ ನದಿದಂಡೆಗೆ ಸಾಗುವಾಗ ಸಮತಟ್ಟಾಗಿರುವ ಭೂಪ್ರದೇಶವನ್ನು ಒಳಗೊಳ್ಳುತ್ತದೆ. ಈ ಪ್ರದೇಶವು ಸರಾಸರಿ ಸಮುದ್ರ ಮಟ್ಟದಿಂದ 1100 ಅಡಿಗಳಷ್ಟು ಎತ್ತರದಲ್ಲಿದೆ. ಮುಖರ್ಜಿಯವರ ಪ್ರಕಾರ 'ಈ ಭೂ ಪ್ರದೇಶದಲ್ಲಿ ಒಟ್ಟಾರೆಯಾಗಿ ಕೃಷ್ಣಾ ಮತ್ತು ಭೀಮಾ ನದಿಗಳು ಸುರಪುರ ಮತ್ತು ಶಹಾಪುರ ವಲಯದ ಉತ್ತರಕ್ಕೆ ಗುರ್ತಿಸಲ್ಪಡುವುದು ಎಂದು ಅಭಿಪ್ರಾಯಿಸುತ್ತಾರೆ.

ಭೀಮಾ ಮತ್ತು ಕೃಷ್ಣ ನದಿಗಳ ಮಳೆ ಸಂಬಂಧಿ ಪ್ರಕ್ರಿಯೆಗಳಿಂದ ಹಾಗೂ ಇವುಗಳಿಗೆ ಪೂರಕವಾಗಿರುವ ದೊಡ್ಡ ದೊಡ್ಡ ಹಳ್ಳಗಳು, ಕೇರೆಗಳು ಹಾಗೂ ಜಲಪಾತಗಳು ಹಾಗೂ ಅನೇಕ ಸಣ್ಣ ಪುಟ್ಟ ಹಳ್ಳ, ಝರಿಗಳಿಂದ ಒಳಗೊಂಡಿರುವುದು ಕಂಡುಬರುತ್ತದೆ. ಆದರೆ ಈ ಹಿಂದೆ ಕಂಡುಬರುವ ಕೆಲವು ಹಳ್ಳಗಳು, ಕೆರೆಗಳು ಮತ್ತು ಜಲಪಾತಗಳು ಈಗ ಮಾಯವಾಗಿರುವವು ಅಂದರೆ ಪಥ ಬದಲಿಸಿರುವುದನ್ನು ಕಾಣುತ್ತೇವೆ. ಈ ಭೂಪ್ರದೇಶವನ್ನು ಒಳಗೊಂಡ ಸುರಪುರ ಪಟ್ಟಣದ ಮೇಲ್ಮೈಸ್ವರೂಪವನ್ನು ಈ ರೀತಿಯಾಗಿ ಗುರುತಿಸಲು ಮತ್ತು ಕಾಣಲು ಸಾಧ್ಯವಾಗುತ್ತದೆ. ಕರ್ನಾಟಕ ರಾಜ್ಯದ ಯಾದಗಿರಿ ಜಿಲ್ಲೆಯ ಉಪ ವಿಭಾಗಕ್ಕೆ ಸೇರಿದ ಅತ್ಯಂತ ದೊಡ್ಡ ತಾಲ್ಲೂಕು ಸುರಪುರ.

ಉತ್ತರದಲ್ಲಿ ಜೇವರ್ಗಿ ಮತ್ತು ಯಾದಗಿರಿ ತಾಲ್ಲೂಕುಗಳನ್ನು ಒಳಗೊಂಡಿದ್ದು, ಪೂರ್ವದಲ್ಲಿ ದೇವದುರ್ಗ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆ ಕಂಡುಬರುತ್ತವೆ. ದಕ್ಷಿಣದಲ್ಲಿ ಲಿಂಗಸೂಗೂರು ತಾಲ್ಲೂಕು, ಪಶ್ಚಿಮದಲ್ಲಿ ಸಿಂದಗಿ ತಾಲ್ಲೂಕು ಮತ್ತು ತಾಳಿಕೋಟೆ ಪಟ್ಟಣಗಳನ್ನು ಹೊಂದಿದೆ. ಈ ಸಂಸ್ಥಾನವು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಸುರಪುರ ತಾಲ್ಲೂಕ ಪ್ರದೇಶವನ್ನು ಆಳ್ವಿಕೆ ಮಾಡಿದ ಶ್ರೇಷ್ಠ ಮನೆತನಗಳಲ್ಲಿ ಒಂದಾಗಿದೆ ಎಂದು ಗುರುತಿಸಲ್ಪಡುತ್ತದೆ.

ಕರ್ನಾಟಕದ ಇತಿಹಾಸದಲ್ಲಿ ಮಹತ್ವದ ಸ್ಥಾನಪಡೆದ 'ದೋ–ಅಬ್' ಪ್ರದೇಶವು ಕೃಷ್ಣ ಮತ್ತು ಭೀಮಾ ನದಿಗಳ ಸಂಗಮ ಪ್ರದೇಶದಲ್ಲಿ ಕೊಕ್ಕಿನಾಕಾರದ ಭೂ ರಚನೆಯನ್ನು ಹೊಂದಿದೆ. ಕ್ಲಾಸ್‌ವಿಟ್ಜ್ ಅವರ ಪ್ರಕಾರ 'ಭೂ ಭಾಗದ ಲಕ್ಷಣ, ಮಣ್ಣಿನ ಗುಣ, ನೆಲದ ಸ್ವರೂಪ, ಕಾಡು, ನದಿ, ತಗ್ಗು ದಿಣ್ಣೆ, ಅಂಕುಡೊಂಕು ಮಾರ್ಗಗಳು ಹಾಗೂ ರಾಜ್ಯಗಳ ನಡುವಿನ ಅಂತರಗಳು ಸೈನಿಕ ಕಾರ್ಯಾಚರಣೆಯನ್ನು ನಿರ್ಧರಿಸುವ ಅಂಶಗಳು ಎಂದಿದ್ದಾರೆ'. ಇವರ ಪ್ರಕಾರ ದೋ–ಅಬ್ ಭೂ ಪ್ರದೇಶವು ಸುರಪುರ, ಶಹಾಪುರ ಮತ್ತು ಜೇವರ್ಗಿ ತಾಲ್ಲೂಕಿನ ಜೋತೆಗೆ ಯಾದಗಿರಿ ಜಿಲ್ಲೆಯನ್ನು ಒಳಗೊಂಡಿದ್ದು ವಿಶಾಲವಾದ ಭೂ ಪ್ರದೇಶದಿಂದ ರಾಯಚೂರು ಜಿಲ್ಲೆವರೆಗೂ ವ್ಯಾಪಿಸಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಸುರಪುರ ಸಂಸ್ಥಾನದ ಸ್ವತಂತ್ರ ಆಳ್ವಿಕೆಯ ಮುನ್ನ ವಿಯನಗರ ಹಾಗೂ ಮೈಸೂರು ರಾಜ್ಯದ ಗುಲ್ಬರ್ಗಾ ಜಿಲ್ಲೆಯ ನೈರುತ್ಯ ಭಾಗವನ್ನು ರೂಪಿಸುತ್ತಿತ್ತು ಎಂದು ತಿಳಿದುಬರುತ್ತದೆ. ಈ ಪ್ರದೇಶದ ಸಾಂಸ್ಕೃತಿಕ ಹಿನ್ನೆಲೆಯ ದೃಷ್ಠಿಯಿಂದ ಜನರ ಜೀವನ ಪದ್ದತಿ ಉಡುಗೆ ತೊಡುಗೆಗಳಲ್ಲಿ, ಕೃಷಿ ಕೌಶಲ್ಯಗಳಲ್ಲಿ, ಆಚಾರ ವಿಚಾರಗಳಲ್ಲಿ ನಡೆ ನುಡಿಗಳಲ್ಲಿ, ರೂಡಿ ಸಂಪ್ರದಾಯಗಳಲ್ಲಿ ಅನೇಕ ಬದಲಾವಣೆಗಳು ಕಂಡುಬರುತ್ತವೆ. ಈ ನಾಡಿನ ಸಾಂಸ್ಕೃತಿಕ ಸಾಹಿತ್ಯಿಕ ಪರಪಂರೆ ಸಾವಿರಾರು ವರ್ಷಗಳಿಂದ ಬೆಳೆದುಬಂದ ಹಿನ್ನೆಲೆಯನ್ನು ನೊಡಬಹುದು.

ಸುರಪುರ ತಾಲ್ಲೂಕು ಭೂಪ್ರದೇಶವು ಬಹುತೇಕವಾಗಿ ಉತ್ತಮ ವಾತಾವರಣದಿಂದ ಕೂಡಿದ್ದು ಮಳೆಗಾಲ, ಚಳಿಗಾಲ, ಬೇಸಿಗೆಕಾಲ ದಿನಗಳಲ್ಲಿ ಋತುಮಾನಗಳಿಗೆ ತಕ್ಕಂತೆ ವಾತವರಣವು ಕಂಡುಬರುತ್ತದೆ. ಬೇಸಿಗೆ ಕಾಲದಲ್ಲಿ ಈ ಭಾಗವು ಮಾರ್ಚತಿಂಗಳ ಮೊದಲವಾರದಿಂದ ಮೇತಿಂಗಳ ಕೊನೆಯವರೆಗೆ ಹೆಚ್ಚು ಬಿಸಿಲಿನಿಂದ ಕೂಡಿರುತ್ತದೆ ಈ ತಿಂಗಳುಗಳ ಮಧ್ಯಂತರ ತಿಂಗಳಿನಲ್ಲಿ ಶೇ.50 ಡಿಗ್ರಿಗಳಷ್ಟು ಬಿಸಿಲಿನ ಉಷ್ಣವು ಅತೀ ಹೆಚ್ಚಾಗಿರುತ್ತದೆ. ಈ ತಾಲ್ಲೂಕಿನಲ್ಲಿ ವಿವಿಧ ಜಾತಿಯ ಹಾಗೂ ಧರ್ಮದ ಜನರು ವಾಸಿಸುತ್ತಿದ್ದು ವಿವಿಧತೆಯಲ್ಲಿ ಏಕತೆ ಎಂಬಂತೆ ಜೀವನ ನಡೆಸಿಕೊಂಡು ಸಾಗುತ್ತಿರುವುದು ಈ ಜನತೆಯ ಹಾಗೂ ಈ ನೆಲದ ಗುಣವಾಗಿದೆ. ಈ ಪ್ರದೇಶದಲ್ಲಿ ಇರುವ ವಚನಕಾರರು, ಸಂತರು, ಆಳ್ವಿಕೆ ಮಾಡಿದ ವಿವಿಧ ರಾಜಮನೆತನೆಗಳು ಈ ಭಾಗದ ಇತಿಹಾಸಕ್ಕೆ ಆಧಾರ

ಸ್ಥಂಭಗಳಿದ್ದಂತೆ. ಪ್ರಸ್ತುತ ದಿನಗಳಲ್ಲಿ ಜನರಲ್ಲಿ ಶಿಕ್ಷಣ ಮತ್ತು ವೈಜ್ಞಾನಿಕ ಬೆಳವಣಿಗೆಗಳಿಂದ ಈ ಪ್ರದೇಶದ ಜನರಲ್ಲಿ ಇರುವ ಮೂಡನಂಬಿಕೆ ಹಾಗೂ ಜಾತಿಪದ್ದತಿಯ ಮನೋಭಾವನೆಗಳು ಅಂತ್ಯವಾಗಿವೆ. ಈ ಭಾಗದಲ್ಲಿ ವಾಸಮಾಡುತ್ತಿರುವ ವಿವಿಧ ಜನಾಂಗದವರು ಧರ್ಮ, ಜಾತಿ, ಮತ, ಪಂಥಗಳ ಬೇಧವಿಲ್ಲದೆ, ನಾವೆಲ್ಲರೂ ಒಂದೇ ಎಂಬ ಭಾವನೆಗಳಿಂದ ಇಂದಿಗೂ ಎಲ್ಲರೂ ಸಹಬಾಳ್ವೆಯ ಜೀವನವನ್ನು ಕಟ್ಟಿಕೊಂಡು ಬದುಕುತ್ತಿದ್ದಾರೆ.

ಚಾರಿತ್ರಿಕ ಹಿನ್ನೆಲೆ :

ಈ ಮನೆತನದ ಆಡಳಿತ ವ್ಯವಸ್ಥೆಯನ್ನು ಕೇವಲ ವಿಜಯನಗರೋತ್ತರ ಕಾಲಕ್ಕೆ ಸೀಮಿತಗೊಳಿಸದೆ ನಾಯಕರ ಪೂರ್ವ ಆಡಳಿತದ ಇತಿಹಾಸದ ಬಗೆಗೆ ಗಮನವನ್ನು ನೀಡಿ ವಿಷಯವನ್ನು ಕಲೆಹಾಕಲಾಗಿದೆ. ಈ ಪ್ರದೇಶದ ಮಧ್ಯೆಯುಗೀನ ಕಾಲದ ಜೊತೆಗೆ ಆಧುನಿಕ ಇತಿಹಾದ ಕುರಿತು ಸಂಶೋಧನೆಯ ಮತ್ತು ಸಂಶೋಧಕರ ಅನುಕೂಲತೆಗಾಗಿ ಮಾಹಿತಿಯನ್ನು ನೀಡಿ, ಈ ನಾಯಕರ ಆಡಳಿತ ವ್ಯವಸ್ಥೆಯನ್ನು ವಿಭಾಗಗಳನ್ನಾಗಿ ಮಾಡಿಕೊಂಡು ವಿಜಯನಗರ ಆಡಳಿತದ ಹಾಗೂ ಅನಂತರದ ವಿಜಯನಗರೋತ್ತರ ಕಾಲದಲ್ಲಿ ಬೇಡ ನಾಯಕರು ಸ್ಥಳೀಯವಾಗಿ ಸ್ವತಂತ್ರ ಸಂಸ್ಥಾನ ನಿರ್ಮಿಸಿಕೊಂಡರು ಎಂಬುದಕ್ಕೆ ಅನೇಕ ಗ್ರಂಥಗಳನ್ನು ಸಂಗ್ರಹಿಸಿರುತ್ತೇನೆ. ಈ ನಾಯಕರು ಆಳ್ವಿಕೆ ಮಾಡಿದಂತಹ ಕಕ್ಕೇರಿ, ಕೊಡೆಕಲ್ಲು, ಗಡ್ಡಿ, ವಾಗನಗೇರಿ ಕೋಟೆ ಅನಂತರದಲ್ಲಿ ಸುರಪುರ ಪಟ್ಟಣ ಸೇರಿದಂತೆ ಸ್ಥಳೀಯವಾಗಿ ಸಂಶೋಧನೆಯನ್ನು ಕೈಗೊಂಡು ಕೇತ್ರಕಾರ್ಯದಲ್ಲಿ ದೊರೆತಿರುವ ಉನ್ನತ ಮಟ್ಟದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಸಂಶೋಧನೆಯನ್ನು ಬರವಣಿಗೆಗೆ ಒಳಪಡಿಸಿರುತ್ತೇನೆ. ಈ ಭಾಗದ ಕಲಬುರ್ಗಿ ವಿ.ವಿ, ಕಲಬುರ್ಗಿ. ಕರ್ನಾಟಕ ವಿ.ವಿ, ಧಾರವಾಡ. ಕನ್ನಡ ವಿ.ವಿ, ಹಂಪಿ. ಕಲಬುರ್ಗಿ, ರಾಯಚೂರ ಜೊತೆಗೆ ಯಾದಗಿರಿ ಜಿಲ್ಲಾ ಗ್ರಂಥಾಲಯಗಳನ್ನು ಸಂದರ್ಶಿಸಿ ಮಾಹಿತಿಯನ್ನು ಪರಾಮರ್ಶಿಸಿ ಕಲೆಹಾಕಿದಂತಹ ಮಾಹಿತಿಯನು ವಿಶ್ಲೇಷಣೆಗೆ ಒಳಪಡಿಸಿರುತ್ತೇನೆ.

ಪ್ರಾಚೀನ ಕರ್ನಾಟಕವನ್ನು ಪ್ರಪ್ರಥಮವಾಗಿ ನಂದರು ಆಳಿದರು ಇವರ ತರುವಾಯದಲ್ಲಿ ಮೌರ್ಯರು, ಗುಪ್ತರು, ಮತ್ತು ಶಾತವಾಹನರು ಆಳ್ವಿಕೆ ನಡೆಸಿದ್ದಾರೆ. ನಂತರದಲ್ಲಿ ಕನ್ನಡನಾಡಿನ ಅಚ್ಚ ಕನ್ನಡಿಗರಾದ ಕದಂಬರು ಆಳ್ವಿಕೆ ಮಾಡಿದ್ದಾರೆ. ಕದಂಬರ ಸಾಮ್ರಾಜ್ಯದ ಸಂಸ್ಥಾಪಕ ಮಯೂರವರ್ಮನೆಂದು ಹೇಳಲಾಗುತ್ತದೆ. ಕನ್ನಡದ ಅರಸು ಮನೆತನಗಳಲ್ಲಿ ಪ್ರಖ್ಯಾತಿ ಪಡೆದ ಅರಸು ಮನೆತನ ಕದಂಬ ವಂಶಸ್ಥರದು. ಕನ್ನಡ ನಾಡಿನ ಅರಸು ಮನೆತನದ ರಾಜಕೀಯ ಇತಿಹಾಸವು ಇವರಿಂದಲೇ ಪ್ರಾರಂಭವಾಯಿತೆಂದು ಹೇಳಬಹುದು. ಕದಂಬರ ತರುವಾಯ ಬದಾಮಿ ಚಾಲುಕ್ಯರು,

ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಳಚೂರಿ ಅರಸರು, ಗಂಗರು, ಹೊಯ್ಸಳರು, ಯಾದವರು ಹಾಗೂ ವಿಜಯನಗರ ಅರಸರು ಈ ಪ್ರದೇಶವನ್ನಾಳಿದ್ದಾರೆ. ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಅನೇಕ ಬದಲಾವಣೆಗಳು ಕಂಡುಬರುತ್ತವೆ. ಬದಲಾವಣೆ ಪ್ರಕೃತಿಯ ನಿಯಮ, ಮನುಷ್ಯನ ಬದುಕು ನಿಂತ ನೀರಾಗಬಾರದು, ಸದಾ ಹರಿಯುವ ನೀರಾಗಬೇಕು. ಅಂದಾಗ ಮಾತ್ರ ನಿಂತಲ್ಲೇ ನಿಂತ ಮಲೀನತೆ ಕೊಚ್ಚಿಹೋಗುತ್ತದೆ. ಅದೇ ಪ್ರಕಾರ ಕಾಲಗತಿಸಿದಂತೆ ಅಲ್ಲಿನ ಧರ್ಮ, ಕಲೆ, ಇತಿಹಾಸ ಬದಲಾಗುವುದು ಸಹಜ, ರಾಜ ಮಹಾರಾಜರ ಆಡಳಿತ ಅವರ ಚರಿತ್ರೆ ಬದಲಾಗುತ್ತದೆ.

ರಾಜನ ಶಕ್ತಿಗನುಗುಣವಾಗಿ ಅವರ ವೈಚಾರಿಕ ನಿಲುವು, ಎದ್ದು ಕಾಣುತ್ತದೆ. ಪ್ರತಿಯೊಬ್ಬ ರಾಜನಲ್ಲಿ ಅಂತಹ ವೈಚಾರಿಕ ನಿಲುವು ಇಲ್ಲದೆ ಹೋದರೆ ತನ್ನ ರಾಜಕೀಯ ವ್ಯವಸ್ಥೆಯು ಏರು-ಪೇರಾಗುವುದು ಸಹಜ. ವೈಚಾರಿಕ ನಿಲುವಿನ ಬಗೆಗೆ ಅರಿತುಕೊಂಡು ರಾಜನಾದವನು ತಿದ್ದಿಕೊಳ್ಳಬೇಕು, ಇಲ್ಲದಿದ್ದರೆ ತನ್ನ ರಾಜ್ಯದ ರಾಜಕೀಯಕ್ಕೆ ಚ್ಯುತಿ ಬರುತ್ತದೆ. ತನ್ನ ರಾಜಕೀಯ ಚಾರಿತ್ರ್ಯಕ್ಕೆ ಹೊಸ ಅರ್ಥ ಹುಡುಕುವ ಅನ್ವೇಷಕ ಮನೋಭಾವ ಇರಬೇಕು ಅಂದಾಗ ಸುಸಂಸ್ಕೃತ ರಾಜನಾಗಲು ಸಾಧ್ಯ ಪ್ರಜೆಗಳು ಹೆಚ್ಚು ಬಯಸುವುದೇ ಸಮೃದ್ಧಿಯ ಬದುಕನ್ನು. ರಾಜ ಮನೆತನಗಳ ಮೇಲೆ ದಾಳಿಗಳಾದಂತಹ ಸಂದರ್ಭಗಳಲ್ಲಿ ಪ್ರಜೆಗಳ ಯೋಗಕ್ಷೇಮ ಕೇಳದೆ ಇದ್ದಾಗ ಸೈನಿಕರು ದುಃಖತಪ್ತರಾಗುತ್ತಾರೆ. ಅಂತಹ ಅವರ ಬದುಕಿನ ಮೇಲೆ ನಂಬಿಕೆ ಇಲ್ಲದೆ ಹೋದಾಗ, ಕೆಟ್ಟ ಪರಿಣಾಮ ಬೀರಿದಾಗ ರಾಜನಾದವನು ಅವರನ್ನು ಹತ್ತಿರಕ್ಕೆ ಕರೆದು ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾಗಬೇಕು. ಇಂತಹ ರಾಜಕೀಯ ಇತಿಹಾಸವೇ ನಿಜವಾದ ಚರಿತ್ರೆ, ಕೆಲವು ಸಂದಭ್ರದಲ್ಲಿ ಇತಿಹಾಸ ಸುಳ್ಳು ಆಗಬಹುದು. ಇತಿಹಾಸವೆಂದರೆ ಕೇವಲ ಗತಕಾಲದಲ್ಲಿ ಆಗಿಹೊದ ಘಟನೆ, ಅಂದರೆ ಕಾಲ ಮತ್ತು ಹೆಸರುಗಳು ಮಾತ್ರ ಸತ್ಯವಿರುತ್ತದೆ. ನಿಜವಾದ ಇತಿಹಾಸ ಎರಡು ಸಾಲುಗಳ ಮಧ್ಯ ಅಡಗಿರುತ್ತದೆ ಎಂಬುದು ಪ್ರಗತಿಪರ ವಿಚಾರವಾದಿಗಳ ಅಭಿಪ್ರಾಯವಾಗಿದೆ. ಇಂತಹ ನಿಲುವುಗಳನ್ನು ಹೊಂದಿದ ರಾಜ ಮನೆತನಗಳಲ್ಲಿ ಸುರಪುರ ಸಂಸ್ಥಾನವು ಒಂದು. ಈ ಹಿನ್ನೆಲೆಯಲ್ಲಿ ನೋಡಿದಾಗ ರಾಜಕೀಯವಾಗಿ ಈ ಭಾಗವು ಅತ್ಯಂತ ಪ್ರಾಬಲ್ಯ ಹೊಂದಿರುವುದನ್ನು ಕಾಣುತ್ತೇವೆ.

ಪ್ರಾಚೀನ ಇತಿಹಾಸದಲ್ಲಿ ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ರಾಜಕೀಯ ಇತಿಹಾಸಕ್ಕೆ ಅನೇಕ ಶಾಸನಗಳು ಪುಷ್ಠಿ ನೀಡುತ್ತವೆ. ಈ ಭಾಗವನ್ನು ಮೌರ್ಯರು, ಗುಪ್ತರು, ಶತವಾಹನರು, ಬಾದಾಮಿ ಚಾಲುಕ್ಯರು ಅಪರೋಕ್ಷವಾಗಿ ಆಳ್ವಿಕೆ ಮಾಡಿದ್ದರೂ ಕೂಡ, ಕಲ್ಯಾಣ ಚಾಲುಕ್ಯರು, ಕಲಚೂರಿ ಅರಸರು, ಯಾದವರು, ವಿಜಯನಗರ ಅರಸರು, ಮುಸ್ಲಿಂ ದೊರೆಗಳು ನೇರವಾಗಿ ಈ ಪ್ರದೇಶಗಳಲ್ಲಿ ರಾಜಕೀಯ ಆಡಳಿತ ನಡೆಸಿದ್ದಾರೆ. ಪ್ರಾಚೀನ ರಾಜಕೀಯ ಇತಿಹಾಸಕ್ಕೆ ಪಾರಂಪರಿಕ ಸ್ಮಾರಕಗಳು ಶಿಲಾ ಶಾಸನಗಳು,

ನಾಣ್ಯಗಳು, ಹಸ್ತಪ್ರತಿಗಳು, ವೀರಗಲ್ಲುಗಳು ಸಾಕ್ಷಿಯಾಗುತ್ತವೆ. ಹೈದ್ರಾಬಾದ್ ಕರ್ನಾಟಕವನ್ನು ಪ್ರಾಚೀನ ಮತ್ತು ಮಧ್ಯೆಯುಗಿನ ಕಾಲವಧಿಯಲ್ಲಿ ಅನೇಕ ರಾಜ ಮನೆತನಗಳ ರಾಜಕೀಯ ಇತಿಹಾಸದೊಂದಿಗೆ ಸುರಪುರ ಸಂಸ್ಥಾನವು ಕೂಡ ತನ್ನದೆ ರಾಜಕೀಯ ಮಹತ್ವವನ್ನು ಹೊಂದಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ರಾಜಕೀಯ ಹಿನ್ನೆಲೆಯಿಂದಲೂ ಈ ಪ್ರದೇಶವು ಅನೇಕ ಮನೆತನಗಳಿಂದ ಆಳ್ವಿಕೆಗೆ ಒಳಪಟ್ಟು ಆಧುನಿಕ ಕಾಲವಧಿಯಲ್ಲಿ ಸುರಪುರ ಸಂಸ್ಥಾನದ ರಾಜಕೀಯ ಚಟುವಟಿಕೆಗಳ ಕೇಂದ್ರಸ್ಥಾನವಾಗಿರುವುದು ತಿಳಿದುಬರುತ್ತದೆ.

ಹೈದ್ರಾಬಾದ್ ಕರ್ನಾಟಕ ಭಾಗದ ಸಾಂಸ್ಕೃತಿಕ ಚರತ್ರೆಯಲ್ಲಿ ಮಾನ್ಯಖೇಡದ ರಾಷ್ಟ್ರಕೂಟರ ಕೊಡುಗೆ ಅಮೋಘವಾಗಿದೆ. ಕಲೆ, ಸಾಹಿತ್ಯ, ಸಂಗೀತ, ಸಾಂಸ್ಕೃತಿಗಳಿಗೆ ಈ ಅರಸರು ತೋರಿದ ವಿಶೇಷ ಕಾಳಜಿ ಇಂದಿಗೂ ಜಿವಂತಿಕೆಯ ನೆಲೆಗಳಾಗಿವೆ. ಅಮೋಘವರ್ಷ ನೃಪತುಂಗನ ಕಾಲದಲ್ಲಿ ಮೊಟ್ಟಮೊದಲು ಉಪಲಬ್ದವಾದ ಲಾಕ್ಷಣಿಕ ಗ್ರಂಥ 'ಕವಿರಾಜ ಮಾರ್ಗ'ವು ಪ್ರದೇಶದ್ದಾಗಿದೆ. ಅಮೋಘವರ್ಷ ನೃಪತುಂಗನ್ನು ತನ್ನ ಆಸ್ಥಾನದಲ್ಲಿ ವಿವಿಧ ಮತ ಧರ್ಮಗಳ ಕವಿಗಳನ್ನು ಪಂಡಿತರನ್ನು ಬರಮಾಡಿಕೊಂಡಿದ್ದನ್ನು. ಕಲಚೂರಿ ಅರಸರ ಕಾಲದಲ್ಲಿಯಂತು ಬಸವಾದಿ ಶರಣರಿಂದ ಅನೇಕ ಮಹತ್ವದ ಬದಲಾವಣೆಗಳು ಕಂಡುಬಂದವು. ಈ ನೆಲದಲ್ಲಿ ಕಲಚೂರಿಯರ ತರುವಾಯ ಬಾದಾಮಿ ಚಾಲುಕ್ಯರು, ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತಿಯ ಅರಸರು ಈ ಭಾಗದಲ್ಲಿ ಆಳ್ವಿಕೆ ಮಾಡಿದ್ದಾರೆ. ನಂತರದಲ್ಲಿ ದೆಹಲಿಯ ಸುಲ್ತಾನರು, ವಿಜಯನಗರ, ಬಹುಮನಿ ಅರಸರು, ಬಿಜಾಪುರದ ಆದಿಲ್‌ಶಾಹಿಗಳು ಮತ್ತು ಮೊಗಲರ ಅರಸರು ಸುರಪುರ ಪ್ರದೇಶವನ್ನು ಆಳಿದ್ದಾರೆ.

ಸುಮಾರು 200 ವರ್ಷಗಳ ಕಾಲ ಬ್ರಿಟಿಷರು ಈ ದೇಶವನ್ನು ಆಳಿದರು ಅವರ ಕಪಿಮುಷ್ಠಿಯಲ್ಲಿ ಸಹ ಸ್ವಾತಂತ್ರ್ಯ ವಿಮೋಚನೆಗಾಗಿ ಅನೇಕ ದೇಶ ಪ್ರೇಮಿಗಳು, ಸ್ವಾತಂತ್ರ್ಯ ಸೇನಾನಿಗಳು, ಸಮಾಜ ಸುಧಾರಕರು ಅನೇಕ ಪಾಳೆಯಗಾರರು ಅವಿರತ ಹೋರಾಟದ ಫಲದಿಂದ ಅವರ ತ್ಯಾಗ ಬಲಿದಾನದಿಂದ 1947ರ ಅಗಸ್ಟ 15ರಂದು ಬ್ರಿಟಿಷರು ಶರಣಾಗತರಾದ ಬೆನ್ನಲೇ ಈ ಪ್ರದೇಶದ ಜನರು ಬಂಧ ಮುಕ್ತರಾದರು. ಅದೇ ವೇಳೆಯಲ್ಲಿ ನೆಮ್ಮದಿಯ ನಿಟ್ಟುಸಿರು ಬಿಡುವ ವೇಳೆಗೆ ಮತ್ತೊಂದು ತೊಂದರೆಯು ಎದುರಾಗಿತ್ತು ಹೈದ್ರಾಬಾದ ನಿಜಾಮನ ದೌರ್ಜನ್ಯದ ಆಡಳಿತ ಇತನ ಕಾಲದಲ್ಲಿ ಮತೀಯ ಸಂಘರ್ಷದಿಂದ ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆಯುಂಟಾಯಿತು. ಈ ಭಾಗದ ಜನತೆ ಮತೀಯ ಶೋಷಣೆಗೆ ತುತ್ತಾದರು ನಿಜಾಮನ ಸಾರ್ವಭೌಮತ್ವವನ್ನು ವಿರೋಧಿಸಿ ಈ ಭಾಗದ ಜನರು ನಿಜಾಮನ ವಿರುದ್ಧ ಹೋರಾಟ ಮಾಡಿದರು. ಈ ಹೋರಾಟದ ಕ್ರಾಂತಿಯು ಈ ಭಾಗದ ಮೂಲೆ ಮೂಲೆಗಳಲ್ಲಿ ಹರಡಿ ಅತ್ಯಂತ ಪ್ರಕರವಾಯಿತ್ತು. ಭಾರತ ಸರಕಾರದ ಉಪ ಪ್ರಧಾನಿಗಳಾದ ಸರದಾರ್ ವಲಭಾಯಿ ಪಟೇಲರು ಸೆಪ್ಟೆಂಬರ್ 13, 1948ರಂದು

ಐತಿಹಾಸಿಕ ಪೋಲಿಸ್ ಕಾರ್ಯಚರಣೆಗೆ ಆಜ್ಞೆ ಮಾಡಿದರು ಭಾರತೀಯ ಸೇನೆ ನಿಜಾಮನ ರಾಜ್ಯವನ್ನು ಅಷ್ಟದಿಕ್ಕಿನಿಂದ ದಾಳಿಮಾಡಿತ್ತು. ದಿನಾಂಕ : 18–09–1948ರಂದು ಸಂಜೆ 5ಗಂಟೆಗೆ ನಿಜಾಮನ್ನು ಶರಣಾಗತನಾಗಿ ಭಾರತದ ಒಕ್ಕೂಟವನ್ನು ಸೇರುವ ಪತ್ರಕ್ಕೆ ಸಹಿ ಮಾಡಿದನ್ನು. ಅಂದಿನಿಂದ ನಿಜಾಮನ ದೌರ್ಜನ್ಯದ ಅಧ್ಯಾಯ ಮುಗಿಯಿತು ಈ ಭಾಗದ ಜನರು ಸಂಪೂರ್ಣ ಸ್ವತಂತ್ರರಾದರು ಒಬ್ಬರನೊಬ್ಬರು ಭೇದಭಾವಗಳ ಮರೆತು ಪ್ರೀತಿಯಿಂದ ಬಾಳುವಂತಾದರು ಬಂಧ ವಿಮುಕ್ತರಾದರು.

ಮುದಗಲ್ಲಿನಲ್ಲಿ ವಾಸವಾಗಿದ್ದ ಸುರಪುರ ಸಂಸ್ಥಾನದ ಪೂರ್ವಜರಾದ ಕಲ್ಲಪ್ಪನಾಯಕ ವಾಸವಾದ ಓಣಿಯನ್ನು ಗೋಸಲಪೇಟೆ ಎಂದು ಕರೆಯುತ್ತಾರೆ. ಇಂದಿಗೂ ಈ ಪೇಟೆ ಇದೆ ಗೋಸಲವೆಂಬುದು ಇವರ ವಂಶವನ್ನು ಸೂಚಿಸುತ್ತದೆ. ಈ ಪೇಟೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೇಡರು ವಾಸವಾಗಿದ್ದರು. ನಂತರದಲ್ಲಿ ಇವರು ಬೇರೆ ಬೇರೆ ಕಡೆಗೆ ತೆರಳಿರಬಹುದಾದ ಸಾದ್ಯತೆ ಇದೆ. ಇಂದು ಇಲ್ಲಿ ಬೇಡರ ಮನೆಗಳು ಇಲ್ಲ. ಈ ಓಣಿಯಲ್ಲಿ 'ಗೋಸಲರಾಯ' ಎಂಬ ಮಾರುತಿ ದೇವಾಲಯ ಇದೆ. ಮುದಗಲ್ಲಿನಲ್ಲಿ ದೊರೆತ ಶಾಸನವೊಂದು ಗೋಸಲರಾಯನನ್ನು ಹೆಸರಿಸುತ್ತ ಆತನನ್ನು ಕಲಿಯುಗ ಕರ್ಣನೆಂದು ಹೇಳುತ್ತದೆ. ಗೋಸಲರಾಯ ದೇವಾಲಯದ ಹಿಂಭಾಗದಲ್ಲಿ ಕ್ರಿ.ಶ. 1560ರ ಕಾಲದ 'ಶಾಸನವಿದೆ' ಎಂದು ಕೃಷ್ಣರಾವ್ ಅವರು ಹೇಳುತ್ತಾರೆ. ಆದರೆ ಅದು ಇಂದು ಲಭ್ಯವಿಲ್ಲ. ಈ ಶಾಸನ ಇಂದು ದೊರೆತ್ತಿದ್ದರೆ ಅದರಿಂದ ಇನ್ನು ಕೆಲವು ಮಾಹಿತಿಗಳು ಲಭ್ಯವಾಗಬಹುದಿತ್ತು. ಮುದಗಲ್ಲಿನಲ್ಲಿರುವ ಈ ಗೋಸಲಪೇಟೆ ಹಾಗೂ ಗೋಸಲರಾಯನ ದೇವಾಲಯ ಸುರಪುರದ ಗೋಸಲವಂಶದ ಅರಸರಿಗೂ ಇರುವ ಸಂಬಂದವನ್ನು ತಿಳಿಸುತ್ತದೆ. ಹಿರೇ ಹನುಮಪ್ಪನಾಯಕನು ಮುದಗಲ್ಲಿನಿಂದ ನಾಲತ್ವಾಡ, ಕೊಡೇಕಲ್‌ಗೆ ಬಂದು ಅಲ್ಲಿ ದೇಶಗತ್ತಿಯನ್ನು ಸಂಪಾದಿಸುತ್ತಾನೆ. ಈತನ ವಂಶಸ್ಥರುಗಳೆ ಕೊಡೇಕಲ್ ನಾಯಕರು ಇದೊಂದು ಚಿಕ್ಕ ಸಂಸ್ಥಾನವಾಗಿತ್ತು. ಇಮ್ಮಡಿ ಹನುಮಪ್ಪನಾಯಕನು ಕೋಳಕೂರು, ರದ್ದೆವಾಡಗಿ, ಬೀದರ ಮಾರ್ಗವಾಗಿ ವರಾಡಕ್ಕೆ ತೆರಳಿದನ್ನು ನಂತರ ಆ ಭಾಗದ ದೊರೆಯಾದನ್ನು ಈತನ ಕುರಿತಾಗಿಯೂ ಸಂಶೋಧನೆ ನಡೆಯಬೇಕಾದ ಅಗತ್ಯ ಇದೆ.

ಕೃಷ್ಣದೇವರಾಯನ ದಂಡೆಯಾತ್ರೆಯಲ್ಲಿ ಸಗರನಾಡಿನ ಬೇಡರ ಪಡೆಗಳು ಪ್ರತ್ಯಕ್ಷವಾಗಿ ಪಾಲ್ಗೊಂಡಿದ್ದವು. ಮುದಗಲ್ಲು ಯುದ್ಧದಲ್ಲಿ ವಿಜಯನಗರವನ್ನು ಬೆಂಬಲಿಸಿದ ಬೇಡ ಪಾಳೆಯಗಾರರು ಸುರಪುರದ ಪೂರ್ವಜರಾಗಿದ್ದರು. ನಂತರದಲ್ಲಿ ಈ ಸಗರನಾಡು ಪ್ರದೇಶ ಇಲ್ಲಿಯ ಬೇಡನಾಯಕರ ವಂಶಕ್ಕೆ ಬಂದಿತು. "ಸಗರನಾಡಿನ ಕೇಂದ್ರ ಕೋಟೆಯಂತಿದ್ದ ಸಗರದುರ್ಗವನ್ನು ಬಹುಮನಿಗಳಿಂದ ವಶಪಡಿಸಿಕೊಂಡು ವಿಜಯನಗರದ ಅರಸ ಅಳಿಯ ರಾಮರಾಯನು "ಸಗರ ಸಂಕ್ರಮಣ ಧುರೀಣ"ನೆಂಬ ಬಿರುದನ್ನು ತನ್ನ ಪಾಳೆಯಗಾರರ ಒಡೆತನಕ್ಕೆ ನೀಡಿದನು. ಈ ಕುರಿತು ಸುರಪುರ

ಸಂಸ್ಥಾನದ ಪೂರ್ವಜರು ವಿಜಯನಗರ ಅಧಿನದಲ್ಲಿದ್ದರು ಎನ್ನುವುದಕ್ಕೆ ಬ್ರಿಟಿಷರ ಅವಧಿಯಲ್ಲಿ ಕ್ರಿ.ಶ. 1842 ಡಿಸೆಂಬರ 10ರಿಂದ ಆಡಳಿತಾಧಿಕಾರಿಯಾಗಿ ಆಗಮಿಸಿದ 'ಮೇಡೊಸ್ ಟೇಲರ'ನು ಸಹ ತನ್ನ "ಹಿಸ್ಟರಿ ಆಫ್ ಮೈ ಲೈಫ್" ಕೃತಿಯಿಂದ ತಿಳಿದುಬರುತ್ತದೆ. ಸುರಪುರ ಅರಸರ ಮೂಲ ಪುರುಷರ ವಿಜಯನಗರದೊಂದಿಗೆ ಸುರಪುರ ಸಂಸ್ಥಾನದ ಪೂರ್ವಜರ ಸಂಬಂಧವನ್ನು ವಿವರಿಸುತ್ತದೆ.

ಸಗರನಾಡು ಕಲಬುರ್ಗಿ, ಯಾದಗಿರಿ ಜಿಲ್ಲೆಗಳ ಸುರಪುರ, ಶಹಾಪುರ, ಜೇವರ್ಗಿ ತಾಲ್ಲೂಕುಗಳ ಗಡಿಯ ರೆಕೆಯಂತಿರುವ ಕೃಷ್ಣ-ಭೀಮೆಯರ ನಡುವಿನ ಪ್ರದೇಶವಾಗಿದೆ. ಸಗರನಾಡಿನ ಪೂರ್ವಕ್ಕೆ ಎಡದೊರೆ ಎರಡು ಸಾಸಿರ, ಪಶ್ಚಿಮಕ್ಕೆ ತರ್ದವಾಡಿ ಸಾಸಿರ ಮತ್ತು ಉತ್ತರಕ್ಕೆ ಆಲಂದೆ ಸಾಸಿರ ಹಾಗೂ ದಕ್ಷಿಣಕ್ಕೆ ಕರಡಕಲ್ಲು ಮುನ್ನೂರನ್ನು ಹೊಂದಿತ್ತು. ಈ ನಾಡಿನಲ್ಲಿ ಜಲದುರ್ಗ, ವನದುರ್ಗ, ಶಹಾಪುರ, ಆಲೂರ ಹಾಗೂ ರಾಯನಪಾಳ್ಯದಲ್ಲಿ ಕೋಟೆ ಕೊತ್ತಲಗಳಿವೆಯಲ್ಲದೆ ಅನೇಕ ಹಳ್ಳಿಗಳಲ್ಲಿ ಹೂಡೆಗಳು ಕಂಡುಬರುತ್ತವೆ. ಆ ಕೋಟೆಗಳು ಮೋಘಲ ಚಕ್ರವರ್ತಿ ಔರಂಗಜೇಬನ ಕ್ರೂರದಾಳಿಗೆ ತುತ್ತಾಗಿ ಶಿಥಿಲವಾದದ್ದು ತಿಳಿಯುತ್ತದೆ. ಅಂತಹ ಹಾಳುಬಿದ್ದ ಕೋಟೆಗಳನ್ನು ಸುರಪುರದ ಅರಸರು ಪುನರ ನಿರ್ಮಿಸಿದರೆಂದು ತಿಳಿದುಬರುತ್ತದೆ. ಅಷ್ಟೇ ಅಲ್ಲದೆ ಆದಿ ಶಿಲಾಯುಗದ ನೆಲೆಗಳಲ್ಲಿ ಗುಳ್ಬಾಳ ಎಂಬಲ್ಲಿ ನೆಲೆಯನ್ನು ಸಂಶೋಧಿಸಲಾಗಿದೆ. ಮಧ್ಯ ಶಿಲಾಯುಗದ ಅನೇಕ ನೇಲೆಗಳು ಸುರಪುರ ಮತ್ತು ತುಮಕೂರು ಭೀಮಾ ಸೇತುವೆಗಳಲ್ಲಿ ಕಂಡುಬಂದಿದೆ. ಸೂಕ್ಷ್ಮ ಶಿಲಾಯುಗದ ಅನೇಕ ನೇಲೆಗಲ್ಲಿ ಹುಣಸಿಹೋಳಿಯು ಕಂಡುಬಂದರೆ, ಕೋಡೆಕಲ್ ಎಂಬ ಗ್ರಾಮದಲ್ಲಿ ಭಸ್ಮ ರಾಶಿಯ ಪರೀಕ್ಷೆಯಿಂದ ನವ ಶಿಲಾಯುಗ ಸಂಸ್ಕೃತಿ ಕ್ರಿ.ಪೂ.2500ರಲ್ಲಿ ಪ್ರಚಲಿತವಾಗಿರುವುದು ಕಂಡುಬರುತ್ತದೆ. ಕಬ್ಬಿಣ ಯುಗದ ಬೃಹತ ಶಿಲಾ ಸಮಾಧಿಗಳ ಸಂಸ್ಕೃತಿಯ ಅವಶೇಷಗಳಿಗೆ ಹಿಂದಿನಿಂದಲೂ ಪ್ರಸಿದ್ಧವಾಗಿದೆ. ಸುರಪುರ, ಶಹಾಪುರ, ಮತ್ತು ಜೇವರ್ಗಿ ತಾಲ್ಲೂಕುಗಳಲ್ಲಿ ಹಗರಟಗಿ, ರಾಜನಕೋಳೂರು, ಚಿಕ್ಕನಹಳ್ಳಿ, ವಿಭೂತಿಹಳ್ಳಿ ಇಜೇರಿ, ಕೊಲ್ಲೂರುಗಳಲ್ಲಿ ಅನೇಕ ಸಮಾಧಿಗಳನ್ನು ಗುರುತಿಸಲಾಗಿದೆ.

ಅಧ್ಯಯನದ ಉದ್ದೇಶಗಳು :

ಸುರಪುರ ಸಂಸ್ಥಾನದ ಸೈನಿಕ ಆಡಳಿತ, ಕಂದಾಯ ವ್ಯವಸ್ಥೆ: ಒಂದು ಚಾರಿತ್ರಿಕ ಅಧ್ಯಯನ (16ನೆ ಶತಮಾನದಿಂದ 19ನೆಯ ಶತಮಾನದವರೆಗೆ) ಎಂಬ ಸಂಶೋಧನಾ ಅಧ್ಯಯನದ ಶೀರ್ಷಿಕೆಯ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಸುರಪುರಿನ ನಾಯಕರ ಆಡಳಿತ ವ್ಯವಸ್ಥೆಯಂತೆ ಅವರ ಸೈನಿಕ ವ್ಯವಸ್ಥೆ ಮತ್ತು ಕಂದಾಯ ಪದ್ದತಿಯನ್ನು ಕುರಿತು ಹೆಚ್ಚು ಗಮನ ಸೆಳೆಯುತ್ತವೆ. ಪ್ರಸ್ತುತ ಸುರಪುರ ನಾಯಕರ ಆಡಳಿತ, ಸಂಸ್ಕೃತಿ, ಚಿತ್ರಕಲೆ, ಸಾಮಾಜಿಕ, ಧಾರ್ಮಿಕ ಮತ್ತು ಇತರೇ ವಿಷಯಗಳಿಗೆ ಸಂಬಂಧಿಸಿದಂತೆ

ಅನೇಕ ಸಂಶೋಧನಾ ಅಧ್ಯಯನಗಳು ನಡೆದಿವೆ. ಆದರೇ ಇವರ ಸೈನಿಕ ವ್ಯವಸ್ಥೆ, ಸೈನಿಕ ಆಡಳಿತ, ಯುದ್ಧ ವಿಚಾರಗಳು, ಕೋಟೆ–ಕೊತ್ತಲಗಳು ಕಂದಾಯ ಪದ್ದತಿಗಳಲ್ಲಿ ಸಮಗ್ರವಾದ ಅಧ್ಯಯನವು ಹೆಚ್ಚಾಗಿ ನಡೆದಿರುವುದಿಲ್ಲ ಪ್ರಸ್ಥುತ ಅಧ್ಯಯನವು ಸೈನ್ಯ ವ್ಯವಸ್ಥೆ, ಯುದ್ಧದ ವಿಚಾರಗಳನ್ನು ಕುರಿತು ಹಾಗೂ ಸ್ಥಳೀಯ ಆಡಳಿತ ಮತ್ತು ಕಂದಾಯ ಪದ್ದತಿಯ ಕುರಿತು ಸೂಕ್ಷ್ಮ ಮತ್ತು ಸ್ಥಳೀಯವಾದ ಸ್ಮಾರಕಗಳನ್ನು, ಶಾಸನಗಳನ್ನು, ವೀರಗಲ್ಲುಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನಕ್ಕೆ ಒಳಪಡಿಸಿರುತ್ತೇನೆ.

ಸುರಪುರ ತಾಲ್ಲೂಕಿನ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಕುರಿತು ಹಾಗೂ ಸಗರನಾಡಿನ ಭೂಪ್ರದೇಶದ ವಿಶೇಷತೆಯ ಜೊತೆಗೆ ಪ್ರಾಕೃತಿಕ ವೈಶೀಷ್ಟ್ಯತೆಯನ್ನು ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಿಜಯನಗರ ಸಾಮ್ರಾಜ್ಯದ ಸಾಮಂತರಾದ ಸುರಪುರ ಸಂಸ್ಥಾನದ ಪೂರ್ವಜರು ಕ್ರಿ.ಶ.1515 ರಿಂದ 1630ರವರೆಗೆ ಕೃಷ್ಣಾ ನದಿಯ ಭಾಗದಲ್ಲಿ ಸ್ಥಳೀಯ ನಾಯಕರಾಗಿ ನೆಲೆಗಳನ್ನು ಕಂಡುಕೊಂಡು ಆಡಳಿತವನ್ನು ಮುನ್ನಡೆಸಿರುವುದರ ಕುರಿತು ಅಷ್ಟೇ ಅಲ್ಲದೆ ವಿಜಯನಗರೋತ್ತರ ಕಾಲದದಲ್ಲಿ ಹೇಗೆ ಆಡಳಿತವನ್ನು ರಕ್ಷಿಸಿಕೊಂಡರು ಎಂಬುದರ ಕುರಿತು ಅಧ್ಯಯನ ನಡೆಸಲಾಗಿದೆ.

ಪ್ರಾರಂಭದಲ್ಲಿ ವಾಗಣಗೇರಿ ಕೋಟೆಯನ್ನು ಮೊದಲನೆ ರಾಜಧಾನಿಯನ್ನಾಗಿ ಸ್ಥಾಪಿಸಿಕೊಂಡು ಆಳ್ವಿಕೆಯನ್ನು ಕೈಗೊಂಡ ನಾಯಕರು ಕ್ರಿ.ಶ.1635 ರಿಂದ 1705ರವರೆಗೆ ಮೂವರು ಅರಸರು ಕಾಲಾನುಕ್ರಮದಲ್ಲಿ ಆಡಳಿತವನ್ನು ವಿಸ್ತರಿಸಿರುವುದರ ಬಗೆಗೆ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕ್ರಿ.ಶ.1705ರಲ್ಲಿ ಔರಂಗಜೇಬನು ಕೈಗೊಂಡ ದಕ್ಷಿಣ ಭಾರತದ ದಂಡೆಯತ್ರೆಯ ಅನಂತರದಲ್ಲಿ ಈ ನಾಯಕರು ಸುರಪುರವನ್ನು ತಮ್ಮ ಎರಡನೆಯ ರಾಜಧಾನಿಯನ್ನಾಗಿ ಮಾಡಿಕೊಂಡು ಕೇಂದ್ರಾಡಳಿತ, ಪ್ರಾಂತೀಯ ಆಡಳಿತ ಮತ್ತು ಸ್ಥಳೀಯ ಆಡಳಿತಗಳನ್ನಾಗಿ ವಿಸ್ತರಿಸಿಕೊಂಡು ಸಗರನಾಡಿನ ಉದ್ದಗಲಕ್ಕೂ ಕ್ರಿ.ಶ.1858 ಫೆ.09ರವರೆಗೆ ಆಡಳಿತವನ್ನು ಮುನ್ನಡೆಸಿರುವ ಕುರಿತು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕೇಂದ್ರಾಡಳಿತದಲ್ಲಿ ನಾಯಕರು ವಿಧಿಸುತ್ತಿದ್ದ ಕಂದಾಯ ಪದ್ದತಿಯ ವಿಧಾನಗಳ ಬಗ್ಗೆ ಹಾಗೂ ಕುಶಲಕರ್ಮಿಗಳ ಆರ್ಥಿಕತೆಯ ಬೆಳವಣಿಗೆಗಳ ಕುರಿತು ಚರ್ಚಿಸಲಾಗಿದೆ. ಈ ಅರಸರು ಪ್ರಾಂತೀಯ ಮತ್ತು ಸ್ಥಳೀಯ ಮಟ್ಟದ ರೈತರಿಗೆ, ಕುಶಲಕರ್ಮಿಗಳಿಗೆ ಯಾವ ವಿಧಾನದ ತೆರಿಗೆ ಪದ್ದತಿಗಳ ಕುರಿತು ಹಾಗೂ ಸ್ಥಳೀಯವಾಗಿ ತೆರಿಗೆ ವಿನಾಯಿತಿ ಜೊತೆಗೆ ಕೃಷಿಯ ಬೆಳವಣಿಗೆಗೆ ಇವರು ನೀಡಿರುವ ಪ್ರೋತ್ಸಾಹದ ಬಗೆಗೆ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅನಂತರ ಕ್ರಿ.ಶ.1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಬ್ರಿಟಿಷ್‌ರ ಮೂಲಕ ನಿಜಾಮನ ಆಳ್ವಿಕೆಗೆ ಒಳಪಟ್ಟ ಸುರಪುರ ಸಂಸ್ಥಾನ ಕ್ರಿ.ಶ.1948 ಸೆ.17ರಲ್ಲಿ ನಿಜಾಮನಿಂದ ಬಿಡುಗಡೆ ಹೊಂದಿದ ಬಗೆಗೆ ಅಧ್ಯಯನವನ್ನು ನಡೆಸಲಾಗಿದೆ.

ಸಂಸ್ಥಾನದ ಕೇಂದ್ರ ಮತ್ತು ಪ್ರಾಂತೀಯ ಸೈನಿಕಾಡಳಿತದ ಜೊತೆಗೆ ಕೋಟೆಗಳಾದ ವಾಗಣಗೇರಿ, ವನದುರ್ಗ ಹಾಗೂ ಸುರಪುರ ದರಬಾರ, ಜೊತೆಗೆ ಪ್ರಾಂತೀಯ ಆಡಳಿತಕ್ಕೆ ಒಳಪಟ್ಟ ಕೋಟೆಗಳ ವೈಶಿಷ್ಟೆತೆಯನ್ನು ವಿವರಿಸಲಾಗಿದೆ. ಸಂಸ್ಥಾನದ ಆಡಳಿತದಲ್ಲಿ ನ್ಯಾಯಾಡಳಿತ, ಕುಲಾಚಾರಿಕೆಯ ವರ್ಗಗಳು ಮತ್ತು ಅಧಿಕಾರ ಹಾಗೂ ಸೈನಿಕರ ಅಧಿಕಾರ ಮತ್ತು ಕಾರ್ಯಗಳ ನಿರ್ವಹಣೆ, ಸೈನಿಕರ ವೇತನ ಮತ್ತು ಭತ್ಯೆಗಳು ಜೊತೆಗೆ ಅವರ ಸಾಮಾಜಿಕ ಸ್ಥಾನಮಾನಗಳ ಕುರಿತು ಅಧ್ಯಯನವನ್ನು ನಡೆಸಲಾಗಿದೆ.

ಅಧ್ಯಯನದ ವಿಧಾನ :

ಪ್ರಸ್ತುತ ಈ ಅಧ್ಯಯನಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಆಕರಗಳನ್ನು ಸಂಗ್ರಹಿಸಿ ಅವುಗಳನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸಿಕೊಂಡು, ಅವುಗಳಿಂದ ಅಧ್ಯಯನದ ಉದ್ದೇಶಿತ ವಿಷಯಗಳಿಗೆ ಸಂಬಂಧಿಸಿದಂತೆ ಟಿಪ್ಪಣಿಯನ್ನು ರಚಿಸಿಕೊಳ್ಳಲಾಗುತ್ತದೆ. ಐತಿಹಾಸಿಕ ವಿಧಿವಿಧಾನಗಳಂತೆ ವಿಶ್ಲೇಷಿಸಿದ ಅನಂತರ ಅವುಗಳನ್ನು ಆಕರಗಳಾಗಿ ಬಳಸಿಕೊಳ್ಳಲಾಗುವುದು. ಸುರಪುರ ಸಂಸ್ಥಾನದ ಸೈನಿಕ ಆಡಳಿತ ವ್ಯವಸ್ಥೆ ಹಾಗೂ ಯುದ್ಧ ಕೌಶಲ್ಯ ಮತ್ತು ಕಂದಾಯ ಪದ್ದತಿಗಳಿಗೆ ಸಂಬಂಧಿಸಿದಂತೆ ಸಮಗ್ರವಾಗಿ ಮಾಹಿತಿ ಕಲೆಹಾಕಿ ವಿಶ್ಲೇಷಿಸಲಾಗಿದೆ. ಕೋಟೆ ಕೊತ್ತಲಗಳ ಅವಶೇಷಗಳಿರುವ ಹಲವು ಗ್ರಾಮಗಳಿಗೆ ಭೇಟಿನೀಡಿ ಮಾಹಿತಿ ಸಂಗ್ರಹಿಸಲಾಗಿದೆ. ಕೋಟೆಗಳ ಇಂದಿನ ಸ್ಥಿತಿಗತಿಯನ್ನು ಅವಲೋಕಿಸಿ, ಛಾಯಾ ಚಿತ್ರಗಳನ್ನು ತೆಗೆದುಕೊಂಡು ಯುದ್ಧಗಳಿಗೆ ಸಂಬಂಧಿಸಿದಂತೆ ಹೈದ್ರಾಬಾದ್ ಕರ್ನಾಟಕವನ್ನು ಅಧ್ಯಯನ ವ್ಯಾಪ್ತಿಯಾಗಿಟ್ಟುಕೊಂಡು ಉದ್ದೇಶ ಮತ್ತು ವ್ಯಾಪ್ತಿಯ ಮಿತಿಯಲ್ಲಿ ಒಂದು ಚಿತ್ರಣ ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಸುರಪುರ ಸಂಸ್ಥಾನವು ಇತರೇ ಸಾಮ್ರಾಜ್ಯ ಅಥವಾ ಸಂಸ್ಥಾನಗಳೊಂದಿಗೆ ಹೊಂದಿದ ಸಂಬಂಧಗಳನ್ನು ಹಾಗೂ ವ್ಯವಹಾರಿಕ ಚಟುವಟಿಕೆಗಳನ್ನು ಪರಸ್ಪರ ಹೋಲಿಕೆ ಮಾಡಿ ಮಾಹಿತಿ ಪಡೆದುಕೊಂಡು ಸಮೀಕ್ಷೆ ಮತ್ತು ತೌಲನಿಕ ವಿಧಾನಗಳನ್ನು ಸಂಶೋಧನೆಗೆ ಅಳವಡಿಸಿರುತ್ತೇನೆ. ಅಧ್ಯಯನವನ್ನು ಸುರಪುರದ ನಾಲ್ಕು ದಿಕ್ಕೂಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ಲಭ್ಯವಾಗುವ ಆಕರಗಳನ್ನು ಸಂಗ್ರಹಿಸಿರುತ್ತೇನೆ. ಸಂಸ್ಥಾನದ ಅರಮನೆ, ಕೋಟೆಗಳನ್ನು, ಕಾವಲು ಗೋಪುರಗಳನ್ನು ಜೊತೆಗೆ ಯುದ್ಧ ಸ್ಥಳಗಳಿಗೆ ಬೇಟಿನೀಡಿ ಛಾಯಾ ಚಿತ್ರಗಳನ್ನು ಸಂಗ್ರಹಿಸಿರುತ್ತೇನೆ. ಪ್ರಸ್ತುತ ಸಂಸ್ಥಾನದಲ್ಲಿರುವ ವಂಶಸ್ಥರನ್ನು ಬೇಟಿಮಾಡಿ ಜೊತೆಗೆ ಸೈನಿಕರಾಗಿ ಸೇವೆಸಲ್ಲಿಸದ ದೊರೆ ಮಕ್ಕಳ ಸೈನಿಕ ಪರಂಪರೆಯನ್ನು ಹೊಂದಿದ ಕುಟುಂಬಗಳ ಮಾಹಿತಿ ಸಂಗ್ರಹಿಸಿ ಅಧ್ಯಯನವನ್ನು ಕೈಗೊಂಡಿರುತ್ತೇನೆ. ಪ್ರಸ್ತುತ ಪಟ್ಟಣದಲ್ಲಿ ವಾಸಮಾಡುತ್ತಿರುವ ಪಂಚಾಂಗ ಹೇಳುವ ಅರ್ಚಕರ ಮನೆತನಗಳಿಗೆ ಭೇಟಿಮಾಡಿ ಅನಂತರ ಲಾವಣಿ

ಪದಕಾರರು, ಜಾನಪದ ಹಾಡುಗಾರರು, ಸಾಹಿತಿಗಳು, ಲೇಖಕರು, ಕವಿಗಳು, ಕಿರ್ತನೆಕಾರರ ಜೊತೆಗೆ ಇತಿಹಾಸ ವಿದ್ವಾಂಸರನ್ನು ಭೇಟಿಮಾಡಿ ಸಂದರ್ಶನಗಳನ್ನು ಕೈಗೊಳ್ಳಲಾಗಿರುತ್ತದೆ. ಇಲ್ಲಿಯವರೆಗೆ ಸುರಪುರ ಸಂಸ್ಥಾನದ ಕುರಿತು ಪ್ರಕಟವಾಗಿರುವ ಕೃತಿಗಳನ್ನು, ಮಹಾಪ್ರಬಂಧಗಳನ್ನು, ಲೇಖನಗಳನ್ನು, ಪತ್ರಿಕೆ ಬರಹಗಳನ್ನು ಬಳಸಿಕೊಂಡಿರುತ್ತೇನೆ. ಭಾರತೀಯ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪತ್ರಗಾರ ಇಲಾಖೆಗಳಿಗೆ, ಸಂಬಂಧಿತ ಜಿಲ್ಲೆಗಳ ಮತ್ತು ರಾಜ್ಯಗಳ ಇಲಾಖೆಗಳಿಗೆ ಬೇಟಿಮಾಡಿ ದತ್ತಾಂಶವನ್ನು ಸಂಗ್ರಹಿಸಿಕೊಂಡು ಕುಲಂಕುಶವಾಗಿ ಚರ್ಚಿಸಿ ಅಧ್ಯಯನಕ್ಕೆ ಒಳಪಡಿಸಿರುತ್ತೇನೆ.

ಅಧ್ಯಯನದ ವ್ಯಾಪ್ತಿ :

ಸುರಪುರ ಸಂಸ್ಥಾನದ ಸೈನಿಕ, ಆಡಳಿತ ಮತ್ತು ಕಂದಾಯ ವ್ಯವಸ್ಥೆ; ಒಂದು ಚಾರಿತ್ರಿಕ ಅಧ್ಯಯನ (16ನೇ ಶತಮಾನದದಿಂದ 19ನೇ ಶತಮಾನದವರೆಗೆ) ಎಂಬ ವಿಷಯವನ್ನು ಸಮಗ್ರವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಸುರಪುರ ಸಂಸ್ಥಾನದ ಇತಿಹಾಸ ಬಹಳ ಪ್ರಾಚೀನವಾದದ್ದು. ಅಧ್ಯಯನದ ಭೌಗೋಳಿಕ ಮತ್ತು ಚಾರಿತ್ರಿಕ ವ್ಯಾಪ್ತಿಯು ಮಧ್ಯಕಾಲಿನ ಕರ್ನಾಟಕದ ಇತಿಹಾಸದ ಅವಧಿಯಿಂದ ಆಧುನಿಕ ಕಾಲದ ಸುರಪುರ ಸಂಸ್ಥಾನದ ಚರಿತ್ರೆಯವರೆಗಿನ ಅಧ್ಯಯನವನ್ನು ಕೈಗೊಳ್ಳಲಾಗಿರುತ್ತದೆ.

ಸಗರನಾಡಿನಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಅವಧಿಯಲ್ಲಿ ಬೇಡ ನಾಯಕರ ಆಳ್ವಿಕೆಯ ಪ್ರಭಾವವು ಈ ಭಾಗದ ಚರಿತ್ರೆಯಲ್ಲಿ ಮಹತ್ವದ್ದಾಗಿದೆ. ಏಕೆಂದರೆ ವಿಜಯನಗರದ ಸಾಮಂತರಾಗಿ ಆಡಳಿತವನ್ನು ಕಟ್ಟಿದ ನಾಯಕರು ಕ್ರಿ.ಶ.1565ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯ ಪತನ ಹೊಂದುತ್ತದೆ. ಅನಂತರದ ಕಾಲದಲ್ಲಿ ಈ ನಾಯಕರು ಅನೇಕ ಸ್ಥಳೀಯ ಪರಿಸ್ಥಿತಿಗಳ ವೀರುದ್ಧ ಹೋರಾಡಿ ಕ್ರಮೇಣವಾಗಿ ಜಲದುರ್ಗ, ಕಕ್ಕೇರಿಗಳನ್ನು ಮತ್ತೆ ತಮ್ಮ ಆಡಳಿತಕ್ಕೆ ಒಳಪಡಿಸಿ ನೀಲಕಂಠರಾಯನ ಗಡ್ಡಿಯಲ್ಲಿ ರಕ್ಷಣೆಯನ್ನು ಪಡೆದುಕೊಂಡ ಅವಧಿಯಲ್ಲಿ ನಾನಾ ಬಗೆಯ ಸ್ಥಿತ್ಯಂತರಗಳುಂಟಾದವು.

ಪ್ರಸ್ತುತ ಅಧ್ಯಯನದ ಕಾಲಮಿತಿಯೆಂದರೆ 16ನೇ ಶತಮಾನದಿಂದ 19ನೇ ಶತಮಾನದವೆರೆಗಿನ ಸುರಪುರ ಸಂಸ್ಥಾನದ ಚರಿತ್ರೆಯನ್ನು ಒಳಗೊಂಡಿದೆ. ಲಕ್ಷ್ಮಣ ತೆಲಗಾವಿ ತಿಳಿಸುವ ಹಾಗೆ ಎಪ್ಪತ್ತೇಳು ಸ್ವತಂತ್ರ ಆಳ್ವಿಕೆಯನ್ನು ಕೈಗೊಂಡ ಪಾಳೆಗಾರರು ಅಥವಾ ನಾಯಕರು ವಿಜಯನಗರ ಪ್ರದೇಶದಿಂದ ಬಂದವರೇ ಎಂದು ತಿಳಿಸುತ್ತಾರೆ. ವಿಜಯನಗರದ ರಾಜರು ಇಂತಹ ಅನೇಕ ಮನೆತನಗಳಿಗೆ ಪೋಷಕರಾಗಿ ಕಾರ್ಯನಿರ್ವಹಿಸುತ್ತಿದ್ದರೆಂಬುದಂತು ಸತ್ಯ. ಸುರಪುರ ಸಂಸ್ಥಾನಕ್ಕೆ ಸಂಬಂಧಿಸಿದಂತೆ ಪೂರ್ವಜರ ಆಶ್ರಯತಾಣ ನೀಲಕಂಠರಾಯನ ಗಡ್ಡಿಯ ಅನಂತರ ವಾಗಣಗೇರಿ ಕೋಟೆ, ವನದುರ್ಗ

ಕೋಟೆ, ಸಗರ ಕೋಟೆ, ಇಜೇರಿ ಕೋಟೆ ಮತ್ತು ಸುರಪುರವು ಸೈನಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಮೊದಲನೆ ಹಂತದಲ್ಲಿ ಇವುಗಳಿಗೆ ಸಂಬಂಧಿಸಿದಂತೆ ಸಂಶೋಧನ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. ವಾಗಣಗೇರಿ ಕೋಟೆಯ ಅನಂತರ ಸುರಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ಕೈಗೊಂಡ ಅವಧಿಯಲ್ಲಿ ಸೈನಿಕ ವ್ಯವಸ್ಥೆ ಮತ್ತು ಯುದ್ಧ ಕೌಶಲ್ಯಗಳಿಗೆ ಸಂಬಂಧಿಸಿದಂತೆ ಸುರಪುರವನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ಕಲಬುರ್ಗಿ ಜಿಲ್ಲೆಯ ಜೇವರ್ಗಿ, ಯಾದಗಿರಿ ಜಿಲ್ಲೆಯ ಶಹಾಪೂರ, ರಾಯಚೂರು ಜಿಲ್ಲೆಯ ದೇವದುರ್ಗ ಮತ್ತು ಲಿಂಗಸೂಗೂರು, ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಗಳವರೆಗೆ ಸಂಶೋಧನಾ ವ್ಯಾಪ್ತಿಯನ್ನು ಹೊಂದಿರುತ್ತದೆ.

ಬರವಣಿಗೆಗಳ ಸಮೀಕ್ಷೆ :

ಇದುವರೆಗಿನ ಚಾರಿತ್ರಿಕ ಬರವಣಿಗೆಗಳ ಸಮೀಕ್ಷೆ **ಜಿ. ಒಪರ್ಟ್** ಅವರ ***'ಆನ ದಿ ವೆಪನ್ಸ್ ಆರ್ಮಿ ಆರ್ಗನೈಸೇಷನ್ ಅಂಡ್ ಪೊಲಿಟಿಕಲ್ ಮ್ಯಾಕ್ಸಿಮ್ಸ್ ಆಫ್ ದಿ ಏನ್ಷಿಯೆಂಟ್ ಇಂಡಿಯನ್ಸ್'*** **(1880)** ಎಂಬ ಕೃತಿಯು ಭಾರತೀಯ ಯುದ್ಧದ ವಿಚಾರಗಳ ಕುರಿತ ಮೊದಲ ಕೃತಿಯಾಗಿದೆ. ಇದರಲ್ಲಿ ಒಪರ್ಟ್‌ರವರು ಪ್ರಾಚೀನ ಭಾರತದ ಆಯುಧಗಳು ಮತ್ತು ಸೈನಿಕ ಸಂಘಟನೆಗಳಿಗೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ.

ಪ್ರಾಮುರ್ಜಜಂಗ್ ಬಹಾದ್ದುರ್ ನವಾಬ್ ಅವರ ***'ಶೊರಾಪೂರ ಆನ್ ಏನ್ಸಿಯೆಂಟ್ ಬೇಡರ ರಾಜ್'*** **(1907)** ಎಂಬ ಪಿಹೆಚ್.ಡಿ ಮಹಾಪ್ರಬಂಧವು ಸುರಪುರ ಸಂಸ್ಥಾನದ ಸ್ಥಾಪನೆ, ಬೆಳವಣಿಗೆ ಹಾಗೂ ವಿಸ್ತೀರ್ಣವನ್ನು ವಿವರಿಸುತ್ತದೆ. ಹಾಗೂ ಸಂಸ್ಥಾನದ ನಾಯಕರ ಮತ್ತು ಬ್ರಿಟಿಷರ ನಡುವಿನ ಸಂಬಂಧವನ್ನು ಕುರಿತು ಮಾಹಿತಿಯನ್ನು ಒಳಗೊಂಡ ಸಂಶೋಧನಾ ಪ್ರಬಂಧವಾಗಿದೆ.

ಜಿ.ಟಿ. ದಾತೆ ಅವರ ***'ಆರ್ಟ ಆಫ್ವಾರ್ ಇನ್ ಏನ್ಷಿಯೆಂಟ್ ಇಂಡಿಯಾ'*** **(1929)** ಎಂಬ ಕೃತಿಯು ಭಾರತೀಯ ಯುದ್ಧ ವಿಚಾರಗಳಿಗೆ ಸಂಬಂಧಿಸಿದಂತೆ ಜೊತೆಗೆ ಪ್ರಾಚೀನ ಯುದ್ಧಗಳು ಸಾಮ್ರಾಜ್ಯದಲ್ಲಿನ ರಾಜನ ಆಜ್ಞೆಯನೆ ಪಾಲಿಸುತ್ತಿದ್ದವು ಎಂಬುದನ್ನು ತಿಳಿಸುತ್ತದೆ. ಪ್ರಾಚೀನ ಮತ್ತು ಮಧ್ಯೆಯುಗಿನ ಕಾಲದ ಯುದ್ಧಗಳಲ್ಲಿ ರಾಜನು ತೆಗೆದುಕೊಳ್ಳುವ ವಿವಿಧ ನಿರ್ಣಯಗಳ ಬಗೆಗೆ ಕುರಿತು ವಿವರಿಸುತ್ತದೆ.

ಪಿ.ಸಿ. ಚಕ್ರವರ್ತಿ ಅವರ ***'ದಿ ಆರ್ಟ್ ಆಫ್ ವಾರ ಇನ್ ಏನ್ಷಿಯೆಂಟ್ ಇಂಡಿಯಾ'*** **(1941)** ಎಂಬ ಕೃತಿಯು ಪ್ರಾಚೀನ ಕಾಲದ ಭಾಷೆಗಳೆಂದು ಗುರುತಿಸಲ್ಪಡುವ ಸಂಸ್ಕೃತ, ಪಾಲಿ ಮತ್ತು ಪ್ರಾಕೃತ ಸಾಹಿತ್ಯಗಳನ್ನಾಧರಿಸಿ ಬರವಣಿಗೆಗೊಂಡ ಕೃತಿಯಾಗಿದೆ. ಇದರಲ್ಲಿ ಸೈನಿಕ ಸಂಘಟನೆ, ಯುದ್ಧದ

ಪ್ರಯಾಣ, ಬಿಡಾರ, ಯುದ್ಧರಂಗ, ಕೋಟೆಗಳು, ನೌಕಾ ಯುದ್ಧಕಲೆ ಇನ್ನೂ ಮೊದಲಾದ ವಿಚಾರಗಳನ್ನು ಒಳಗೊಂಡು ವಿವರಣೆಯನ್ನು ನೀಡುವಂತಹ ಕೃತಿಯಾಗಿದೆ.

ವಿ.ಆರ್.ಆರ್ ದೀಕ್ಷಿತಾರ್ ಅವರ ***'ವಾರ್ ಇನ್ ಏನ್ಷಿಯೆಂಟ್ ಇಂಡಿಯಾ'*** **(1944)** ಎಂಬ ಕೃತಿಯು ವೇದಗಳ ಕಾಲದಿಂದ ವಿಜಯನಗರದ ಅವಧಿಯವರೆಗಿನ ಭಾರತೀಯ ಯುದ್ಧ ವಿಚಾರಗಳನ್ನು ಕುರಿತು ಚರ್ಚಿಸುತ್ತದೆ. ಈ ಕೃತಿಯು ಮುಖ್ಯವಾಗಿ ಪ್ರಾಚೀನ ಸಂಸ್ಕೃತ ಮತ್ತು ತಮಿಳು ಸಾಹಿತ್ಯವನ್ನಾಧರಿಸಿ ಬರವಣಿಗೆಗೆ ಒಳಪಟ್ಟಿದೆ. ಪ್ರಾಚೀನ ಭಾರತೀಯರು ಬೆಳವಣಿಗೆಗೊಂಡು ಒಂದು ಸ್ಥಳದಲ್ಲಿ ನೆಲೆಯುರಿ ತನ್ನದೆ ಸಮಾಜವನ್ನು ಕಟ್ಟಿಕೊಂಡ ಕಾಲದವಧಿಯಲ್ಲಿ ಇವರು ಸಿಡಿಮದ್ದು ಮತ್ತು ವಿಮಾನಗಳ ಬಳಕೆಗಳ ಬಗೆಗೆ ಅರಿತವರಾಗಿದ್ದರೆಂದು ಸಮರ್ಥಿಸುತ್ತಾರೆ.

ಪೂಜಾರ ವಿ.ಜಿ. ಅವರ ***'ನೀಷ್ಠೆಯ ಕಲ್ಲಪ್ಪನವರು ಮತ್ತು ವೀರಪ್ಪನವರು'*** **(1948)** ಎಂಬ ಕೃತಿಯು ಸುರಪುರ ಸಂಸ್ಥಾನದ ಆಡಳಿತದ ಮುಖ್ಯ ಭಾಗವಾದ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಆರ್ಥಿಕವಾಗಿ ಸಂಸ್ಥಾನವನ್ನು ಬೆಳೆಸುವಂತಹ ಪ್ರಧಾನ ಮಂತ್ರಿಗಳ ಸೇವೆಯ ಕುರಿತು ವಿವರಿಸುತ್ತದೆ. ಸಂಸ್ಥಾನದ ಆಡಳಿತದಲ್ಲಿ ದಕ್ಷ ಮತ್ತು ಪ್ರಾಮಾಣಿಕ ಕಾರ್ಯವನ್ನು ನಿರ್ವಹಿಸಿದ ಅನೇಕ ಮಂತ್ರಿಗಳಲ್ಲಿ ಇವರು ಪ್ರಮುಖರು ಎಂಬುದರ ಕುರಿತು ಈ ಕೃತಿಯು ಮಾಹಿತಿಯನ್ನು ಒಳಗೊಂಡಿದೆ.

ದೇಸಾಯಿ ಪಾಂಡುರಂಗರಾವ್ ಅವರ ***'ಮದಗಜ ಮಲ್ಲ'*** **(1951)** ಎಂಬ ಕೃತಿಯು ಸಂಸ್ಥಾನದ ಆಡಳಿತದ ಆರಂಭದಲ್ಲಿ ರಾಜ ಗಡ್ಡಿಪಿಡ್ಡನಾಯಕನು ವಿಜಯಪುರ ಸುಲ್ತಾನನು ಏರ್ಪಡಿಸಿದ 'ಮದಗಜ ಕಾಳಗ'ದಲ್ಲಿ ಆನೆಯ ಜೊತೆಗೆ ಹೋರಾಡಿ ವಿಜಯಶಾಲಿಯಾದನ್ನು ಎಂಬುದರ ಕುರಿತು ವಿವರಿಸುತ್ತದೆ. ಅಷ್ಟೇ ಅಲ್ಲದೆ ವಿಜಯಪುರ ಸುಲ್ತಾನನ್ನು ಸುರಪುರದ ನಾಯಕನಿಗೆ 'ರಾಜ' ಎಂಬ ಬಿರುದನ್ನು ನೀಡಿ ತನ್ನ ಸಾಮ್ರಾಜ್ಯದಲ್ಲಿ ಗೌರವಿಸಿರುವುದರ ಕುರಿತು ಹಾಗೂ ಸುರಪುರದ ಅರಸರ ಯುದ್ಧ ಕೌಶಲ್ಯಗಳನ್ನು ಮಾಹಿತಿಯನ್ನು ಒಳಗೊಂಡ ಕೃತಿಯಾಗಿದೆ.

ಹಾಲ್ಗೇರಿ ಚನ್ನಬಸವಯ್ಯ ಮಾಸನೂರ ಅವರ ***'ಸುರಪುರದ ಬಂಡಾಯದ ಲಾವಣಿ'*** **(1953)** ಎಂಬ ಈ ಕೃತಿಯು ಅಂದಿನ ಕಾಲದ ಸ್ಥಳೀಯ ಸೈನಿಕರ ಹೋರಾಟಗಳ ಮತ್ತು ಅವರ ವಿವಿಧ ಯುದ್ಧ ತಂತ್ರಗಳನ್ನು ಕುರಿತು ಜಾನಪದ ಅಥವಾ ಲಾವಣಿ ಪದಗಳ ಮೂಲಕ ಅರಸರ ಆಡಳಿತದ ಕಾರ್ಯವೈಕರಿಗಳ ಹಾಗೂ ಯುದ್ಧಗಳ ಬಗೆಗೆ ಮಾಹಿತಿಯನ್ನು ತಿಳಿಸುವ ಕೃತಿಯಾಗಿದೆ.

ಜೆ.ಎನ್. ಸರ್ಕಾರ್ ಅವರ ***'ಮಿಲಿಟರಿ ಹಿಸ್ಟರಿ ಆಫ್ ಇಂಡಿಯಾ'* (1960)** ಎಂಬ ಕೃತಿಯು ಯುದ್ಧಗಳನ್ನು ಆಧರಿಸಿ ಭಾರತೀಯ ಯುದ್ಧ ಕೌಶಲ್ಯ ಮತ್ತು ತಂತ್ರಗಳ ಬೆಳವಣಿಗೆಗಳ ಬಗ್ಗೆ ಬೆಳಕು ಚೆಲ್ಲುವ ಕೆಲವು ಕೃತಿಗಳಲ್ಲಿ ಇದು ಮೊದಲನೆಯ ಕೃತಿಯಾಗಿದೆ. ಇದರಲ್ಲಿ ಅಲೆಕ್ಸಾಂಡರ್‌ನ ಹೈಡಾಸ್ಪಸ್ ಕದನದಿಂದ ಕ್ರಿ.ಶ.18ನೇ ಶತಮಾನದ ಮರಾಠರ ಯುದ್ಧಗಳವರೆಗೆ ನಡೆದ ಕದನಗಳಲ್ಲಿ ಕೆಲವು ಪ್ರಮುಖ ಯುದ್ಧಗಳನ್ನು ವಿಶ್ಲೇಷಿಸುವ ಮೂಲಕ ಭಾರತೀಯ ಯುದ್ಧ ತಂತ್ರಗಳನ್ನು ಒಳಗೊಂಡ ಕೃತಿಯಾಗಿದೆ.

ಈ.ಎನ್. ಪಂತ ಅವರ ***'ವೆಪೆನ್ಸ್ ಅಂಡ್ ಮಿಲಿಟರಿ ಸೈನ್ಸ್ ಇನ್ ಏನ್ಷಿಯಂಟ್ ಇಂಡಿಯಾ'* (1964)** ಎಂಬ ಕೃತಿಯು ಪ್ರಾಚೀನ ಭಾರತದ ಆಯುಧಗಳನ್ನು ಕುರಿತು ವಿವರಿಸುತ್ತದೆ. ಆಯುಧಗಳಿಗೆ ಸಂಬಂಧಿತ ಮುಖ್ಯ ಕೃತಿಯಾಗಿದ್ದು ಅಂದಿನ ಕಾಲದ ಸೈನಿಕ ವ್ಯವಸ್ಥೆ, ಯುದ್ಧ ಕೌಶಲ್ಯಗಳು ಮತ್ತು ಬಳಸುವಂತ ಸಲಕರಣೆಗಳು ಯಾವವು ಎಂಬುದರ ಕುರಿತು ಹಾಗೂ ಭಾರತೀಯರು ಕಾಲವಧಿಯಲ್ಲಿ ಬದಲಾವಣೆಗೊಂಡ ಯುದ್ಧ ತಂತ್ರಜ್ಞಾನದ ಬೆಳವಣಿಗೆಯ ಮೇಲೆ ಬೆಳಕು ನೀಡುತ್ತದೆ.

ಬಿ.ಪಿ. ಸಿನ್ಹಾ ಅವರ ***'ವಾರ್ ಇನ್ ಏನ್ಷಿಯೆಂಟ್ ಇಂಡಿಯಾ'* (ಕ್ರಿ.ಪೂ.600–ಕ್ರಿ.ಶ.300) (1965)** ಎಂಬ ಕೃತಿಯಲ್ಲಿನ ಲೇಕನಗಳು ಪ್ರಾಚೀನ ಭಾರತೀಯ ಯುದ್ಧ ಕಲೆಗೆ ಸಂಬಂದಿಸಿದಂತೆ ಸೈನಿಕ ವ್ಯವಸ್ಥೆಯು ಯುದ್ಧವನ್ನು ಕೈಗೊಳ್ಳುವ ಪೂರ್ವದಲ್ಲಿ ಅವರು ಅನುಸರಿಸುತ್ತಿದ್ದ ಕೆಲವೊಂದು ನಿಯಮಗಳ ವಿವರಣೆಗಳನ್ನು ಕುರಿತು ಒಳಗೊಂಡಿದೆ. ಪ್ರಾಚೀನ ಕಾಲದ ಯುದ್ಧಕಲೆಗೆ ಸಂಬಂಧಿಸಿದಂತೆ ಮತ್ತು ಸೈನಿಕರ ವಿವಿಧ ಕೂಟಗಳ ಬಗೆಗೆ ಹಾಗೂ ಸೈನಿಕ ಕೂಟಗಳು ಯುದ್ಧದ ಸಮಯದಲ್ಲಿ ತೋರಪಡಿಸುವ ಕೌಶಲ್ಯ ಮತ್ತು ತಂತ್ರಗಾರಿಕೆಗಳ ಕುರಿತು ಈ ಕೃತಿಯು ಚರ್ಚಿಸುತ್ತದೆ.

ಟಿ.ಜಿ. ಸುಬ್ರಹ್ಮಣ್ಯ ಅವರ ***'ಫೇಮಸ್ ಬ್ಯಾಟಲ್ಸ್ ಇನ್ ಇಂಡಿಯನ್ ಹಿಸ್ಟರಿ'* (1969)** ಎಂಬ ಕೃತಿಯಲ್ಲಿ 'ಹೈಡಾಸ್ಪಸ್ ಕದನ'ದ ಅನಂತರದಿಂದ ಕ್ರಿ.ಶ.1565ರವರೆಗೆ ನಡೆದಂತಹ ಪ್ರಮುಖ ಯುದ್ಧಗಳ ವಿಶ್ಲೇಷಣೆಗಳನ್ನು ಒಳಗೊಂಡಿದೆ. ಈ ಕಾಲವಧಿಯ ಯುದ್ಧಗಳಲ್ಲಿ ನಡೆದ ಪ್ರಸಂಗಗಳನ್ನು ವಿವರಿಸುತ್ತ ಯುದ್ಧದಲ್ಲಿ ಭಾಗವಹಿಸಿದ ಪ್ರತಿಯೊಂದು ಯುದ್ಧ ಪಡೆಗೆ ಮೆಲ್ವಿಚಾರಕರು ಇರುವುದನ್ನು ಸ್ಪಷ್ಟಪಡಿಸುತ್ತದೆ. ಹಾಗೂ ಯುದ್ಧ ಪ್ರಸಂಗಗಳಲ್ಲಿ ಸೈನಿಕರು ಅನುಭವಿಸಿದ ಕಷ್ಟ–ನಷ್ಟಗಳಿಗೆ ಪೂರಕವಾದ ಎಲ್ಲಾ ತರಹದ ವ್ಯವಸ್ಥೆ ಕೈಗೊಂಡು ರಾಜ್ಯದ ಆಡಳಿತವನ್ನು ಗಟ್ಟಿಗೊಳಿಸುವುದರ ವಿಸ್ತೀರ್ಣವನ್ನು ಬಲಪಡಿಸುವುದರ ಕುರಿತು ಚರ್ಚಿಸಲಾಗಿದೆ.

ಎನ್.ಎಚ್. ಕುಲಕರ್ಣಿ ಅವರ ***'ಬ್ರಿಟಿಷ ರಿಲೆಷನ್ಷಿಫ್ ವಿಥ್ ದ್ ಪ್ರಿನ್ಸಿಪಾಲಿಟಿ ಸುರಪುರ'* (1972)** ಎಂಬ ಈ ಮಹಾಪ್ರಬಂಧವು ಸುರಪುರ ಸಂಸ್ಥಾನದ ಕುರಿತು ಅಪ್ರಕಟಿತ ಸಂಶೋಧನಾ (ಪಿಹೆಚ್.ಡಿ)

ಮಹಾಪ್ರಬಂಧವಾಗಿದೆ. ಇದರಲ್ಲಿ ಸುರಪುರ ಸಂಸ್ಥಾನದ ಸ್ಥಾಪನೆ ಮತ್ತು ಆಡಳಿತದ ವಿವರಣೆಯನ್ನು ನೀಡುತ್ತದೆ. ಅಷ್ಟೇ ಅಲ್ಲದೆ ಹೈದ್ರಾಬಾದಿನ ನಿಜಾಮ ಮತ್ತು ಬ್ರಿಟಿಷ ಅಧಿಕಾರಿಗಳು ತಮ್ಮ ಆಡಳಿತದ ಸ್ಥಾಪನೆಗಾಗಿ ಸುರಪುರ ನಾಯಕರ ಜೊತೆಗೆ ಹೊಂದಿರುವ ಸಂಬಂಧಗಳ ಕುರಿತು ಮಾಹಿತಿಯನ್ನು ಒಳಗೊಂಡಿರುವಂತಹ ಮಹಾಪ್ರಬಂಧವಾಗಿದೆ.

ಅರುನಿ ಎಸ್.ಕೆ. ಅವರ ***'ಹಿಸ್ಟರಿ ಆಂಡ್ ಕಲ್ಚರ್ ಆಪ್ ಸುರಪುರ ಸಂಸ್ಥಾನ'*** **(1857–1958) (1998)** ಎಂಬ ಈ ಮಹಾಪ್ರಬಂಧವು ಪ್ರಥಮ ಸ್ವಾತಂತ್ರ ಸಂಗ್ರಾಮದ ಅನಂತರ ಸುರಪುರ ಸಂಸ್ಥಾನದ ಇತಿಹಾಸ ಕುರಿತು ಕೈಗೊಂಡ ಸಂಶೋಧನಾ (ಪಿಹೆಚ್.ಡಿ) ಮಹಾಪ್ರಬಂಧವಾಗಿದೆ. ಸುರಪುರ ನಾಯಕರ ಆಡಳಿತದ ಕಾಲಾನುಕ್ರಮಣಿಕೆ ಜೊತೆಗೆ ಆ ಭಾಗದ ಭೌಗೋಳಿಕ ಹಿನ್ನೆಲೆ ಮತ್ತು ಇವರ ಆಡಳಿತ ಅವಧಿಯಲ್ಲಿ ಸಗರನಾಡಿನ ಉದ್ದಗಲಕ್ಕೂ ನಿರ್ಮಾಣಗೊಂಡ ಕೋಟೆಗಳ ಪ್ರಾಕೃತಿಕ ಹಿನ್ನಲೆಯನ್ನು ಕುರಿತು ಮಾಹಿತಿ ನೀಡುವಂತಹ ಮಹಾಪ್ರಬಂಧವಾಗಿದೆ.

ಡಾ.ವಸು. ಎಂ.ವಿ. ಅವರ ***'ದಕ್ಷಿಣ ಕರ್ನಾಟಕದ ಅರಸು ಮನೆತನಗಳು'*** **(2001)** ಎಂಬ ಕೃತಿಯು ಕ್ರಿ.ಶ.10ನೇ ಶತಮಾನದಿಂದ 18ನೇ ಶತಮಾನದವರೆಗೆ ಕರ್ನಾಟಕದ ಬಯಲು ನಾಡಿನ ಪ್ರದೇಶಗಳಾದ ಗುಲಬರ್ಗಾ, ಚಿತ್ರದುರ್ಗ, ತುಮಕೂರು, ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು, ಚಾಮರಾಜನಗರ ಜೊತೆಗೆ ಇತರೇ ಪ್ರದೇಶಗಳನ್ನಾಳಿದ ರಾಜಮನೆತನಗಳ ಚರಿತ್ರೆಯನ್ನು ಒಳಗೊಂಡಿದೆ. ಆಯಾ ಭಾಗಗಳಲ್ಲಿ ಆಳ್ವಿಕೆ ಮಾಡಿದಂತಹ ಅರಸರ ಮತ್ತು ಪಾಳೆಗಾರರ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಗಳ ಮಾಹಿತಿಯು ದೊರೆಯುತ್ತದೆ. ಸ್ಥಳೀಯವಾಗಿ ನಾಯಕರು ಮತ್ತು ನಾಡ ಪ್ರಭುಗಳು ನೀಡಿದಂತ ಕೊಡುಗೆಗಳ ಕುರಿತು ವಿಶ್ಲೇಷಣೆ ನೀಡುವಂತಹ ಕೃತಿಯಾಗಿದೆ.

ತಾರಿಹಳ್ಳಿ ಹನುಮಂತಪ್ಪ ಅವರ ***'ನಾಯಕರ ಮಹಾಸಂಸ್ಥಾನ ಸುರಪುರ'*** **(2002)** ಎಂಬ ಕೃತಿಯು ಸುರಪುರ ನಾಯಕ ಅರಸರ ಕಾಲಾನುಕ್ರಮಣಿಕೆಯಲ್ಲಿ ಆಡಳಿತಾತ್ಮಕ ಜೀವನ ಶೈಲಿಯ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಈ ನಾಯಕರ ಆಡಳಿತ ವ್ಯವಸ್ಥೆಯಲ್ಲಿ ನಿರ್ಮಾಣಗೊಂಡ ಕೆಲವು ಕೋಟೆ–ಕೊತ್ತಲಗಳ ಹಾಗೂ ಆಳ್ವಿಕೆಯಲ್ಲಿ ಅನುಸರಿಸುತ್ತಿದ್ದ ನ್ಯಾಯಾಂಗ ಮತ್ತು ಧಾರ್ಮಿಕ ವ್ಯವಸ್ಥೆಯ ಕುರಿತು ಮಾಹಿತಿಯನ್ನು ಒಳಗೊಂಡ ಕೃತಿಯಾಗಿದೆ.

ಬಿ. ಕೃಷ್ಣಮಾಚಾರ್ಯ ಅವರ ***'ಮರೆಯಲಾಗದ ಸುರಪುರ ರಾಜರ ಚರಿತ್ರೆ'*** **(2003)** ಎಂಬ ಈ ಕೃತಿಯು ಸುರಪುರ ನಾಯಕರ ಪೂರ್ವಜರ ಇತಿಹಾಸದ ಜೊತೆಗೆ ಸಂಸ್ಥಾನವನ್ನು ಆಳ್ವಿಕೆ ಮಾಡಿದಂತ 12 ಜನ ರಾಜರುಗಳ ಚರಿತ್ರೆಯನ್ನು ಒಳಗೊಂಡ ಕೃತಿಯಾಗಿದೆ. ಅಷ್ಟೇ ಅಲ್ಲದೆ ಸಗರನಾಡಿನ ಕಲೆ,

ಸಾಹಿತ್ಯ ಇತಿಹಾಸವನ್ನು ಒಳಗೊಂಡ ಸಂಸ್ಕೃತ ಮತ್ತು ತೆಲುಗು ಭಾಷೆಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಯಥಾವತ್ತಾಗಿ ಉಲ್ಲೇಖಿಸಲಾಗಿದೆ. ಸುರಪುರ ಸಂಸ್ಥಾನದ ಸ್ಥಾಪಕನಾದ ಗಡ್ಡಿ ಪಿಡ್ಡನಾಯಕನಿಗೆ **'ಗಜಗಂಡ ಭೇರುಂಡ'**ನೆಂಬ ಬಿರುದಿನೊಂದಿಗೆ ಪ್ರಾರಂಭಗೊಂಡ ಚರಿತ್ರೆ ಕ್ರಿ.ಶ.1857ರವರೆಗೆ ಆದಂತ ಆಡಳಿತಾತ್ಮಕ ಬೆಳವಣಿಗೆಗಳ ಕುರಿತು ವಿವರಣೆ ಒಳಗೊಂಡ ಕೃತಿಯಾಗಿದೆ.

ಕಪಟರಾಳ ಕೃಷ್ಣರಾಯ ಅವರ ***'ಸುರಪುರ ಸಂಸ್ಥಾನದ ಇತಿಹಾಸ'*** **(2005)** ಎಂಬ ಈ ಕೃತಿಯು ಸುರಪುರದ ನಾಯಕರ ಚರಿತ್ರೆಯನ್ನು ಹಸ್ತಪ್ರತಿಗಳ ಸಂಗ್ರಹಿಸಿ ಬರವಣಿಗೆಗೆ ಒಳಪಡಿಸಿದಂತಹ ಕೃತಿಯಾಗಿದೆ. ಈ ನಾಯಕರ ಪೂರ್ವಜರ ನೆಲೆಗಳನ್ನು ಗುರುತಿಸುವ ಮೂಲಕ ಇವರ ವಂಶಸ್ಥರ ಆಳ್ವಿಕೆ ಮತ್ತು ಬೆಳೆದುಬಂದದಾರಿ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಈ ನಾಡಿನ ಈಶಾನ್ಯ ಭಾಗದಲ್ಲಿನ ಮೂರು ಜಿಲ್ಲೆಗಳಾದ ಕಲಬುರ್ಗಿ, ರಾಯಚೂರು, ಯಾದಗಿರಿ ಭಾಗಗಳಲ್ಲಿ ನಾಯಕರು ಕೈಗೊಂಡ ಆಡಳಿತಾತ್ಮಕ ಕೊಡುಗೆಗಳ ಬಗೆಗೆ ಮಾಹಿತಿಯನ್ನು ಒಳಗೊಂಡಿರುವ ಕೃತಿಯಾಗಿದೆ.

ಭಾಸ್ಕರರಾವ್ ಮುಡಬೂಳ ಅವರ ***'ಮರೆತು ಹೋದ ಸುರಪುರ ಇತಿಹಾಸ'*** **(2015)** ಎಂಬ ಈ ಕೃತಿಯು ಕ್ರಿ.ಶ.1656 ರಿಂದ 1858 ಫೆ.09ರ ಕಾಲದವರೆಗಿನ ಸುರಪುರ ನಾಯಕರ ಇತಿಹಾಸವನ್ನು ಒಳಗೊಂಡ ಕೃತಿಯಾಗಿದೆ. ಈ ಕೃತಿಯು ಎರಡನೆಯ ಭಾಗದಲ್ಲಿ ಆಂಗ್ಲರ ವಿರುದ್ಧ ನಡೆದ ಘೋರ ಯುದ್ಧಗಳಲ್ಲಿ ರಾಣಿ ಈಶ್ವರಮ್ಮನ ದಿಟ್ಟತನದ ನಿರ್ಧಾರಗಳು ಮತ್ತು ರಾಜ ನಾಲ್ವಡಿ ವೆಂಕಟಪ್ಪನಾಯಕನು ಕೈಗೊಂಡ ಯುದ್ಧದ ತಯಾರಿ ಮತ್ತು ಸಂಘಟನೆಗಳ ಬೆಂಬಲ ಅವರ ಶೌರ್ಯ–ಸಾಹಸ ಹಾಗೂ ನಾಯಕನ ದೇಶಾಭಿಮಾನದ ಸಂಗತಿಗಳ ಕುರಿತು ಮಾಹಿತಿಯನ್ನು ನೀಡುವಂತಹ ಕೃತಿಯಾಗಿದೆ.

ರಾಜಗೋಪಾಲ ಎಮ್. ವಿಭೂತಿ, ಕೃಷ್ಣಾ ವಿ. ಸುಬೇದಾರ ಅವರ ***'ಸಗರ ನಾಡು ಸೌರಭ'*** **(2016)** ಎಂಬ ಈ ಕೃತಿಯು ಸುರಪುರಿನ ನಾಯಕರು ಆಡಳಿತವನ್ನು ಕೈಗೊಂಡ ಸಗರನಾಡು ಕೃಷ್ಣ ಮತ್ತು ಭೀಮಾ ನದಿಗಳ ಮಧ್ಯದ ಪ್ರದೇಶವೆಂದು ಗುರುತಿಸುತ್ತದೆ. ಇದು ಸುರಪುರ, ಶಾಹಾಪುರ ಮತ್ತು ಜೇವರ್ಗಿ ತಾಲ್ಲೂಕುಗಳನ್ನು ಒಳಗೊಂಡಿದ್ದು, ಆಡಳಿತದಲ್ಲಿ ಸಗರ ಮೂನ್ನೂರು (300) ಮತ್ತು ಸಗರ ಐದನೂರು (500) ಎಂಬುದರ ಕುರಿತು ತಿಳಿಸುತ್ತದೆ. ವಿಜಯನಗರೋತ್ತರ ಕಾಲದಲ್ಲಿ ಮುದಗಲ್ ಕೋಟೆ ಮತ್ತು ದೋ–ಅಬ್ ಪ್ರದೇಶಗಳ ಆಳ್ವಿಕೆಯಲ್ಲಿ ಶಸ್ತ್ರಾಸ್ತ್ರಗಳ ಮತ್ತು ನ್ಯಾಯಾಂಗ ವ್ಯವಸ್ಥೆಯ ವಿವಿಧ ಆಯಾಮಗಳ ಮೇಲೆ ಬೆಳಕನ್ನು ಚೆಲ್ಲುವ ಅಧ್ಯಯನಾತ್ಮಕ ಲೇಖನಗಳನ್ನು ಒಳಗೊಂಡ ಕೃತಿಯಾಗಿದೆ.

ಡಾ.ಅಮರೇಶ ಯತಗಲ್ ಅವರ ***'ಚಾರಿತ್ರಿಕ ಸುರಪುರ'* (2018)** ಎಂಬ ಈ ಕೃತಿಯು ಸುರಪುರ ಸಂಸ್ಥಾನಿಕರ ಮೂಲ ನೆಲೆಯ ಜೊತೆಗೆ ಆಳ್ವಿಕೆ ಮಾಡಿದ ಅರಸರ ಬಗೆಗೆ ಮತ್ತು ರಾಣಿಯರ ಹೆಸರುಗಳಿಂದ ಗುರುತಿಸಲ್ಪಡುವ ಗ್ರಾಮಗಳ ಸ್ಥಳ ನಾಮಗಳ ಕುರಿತು ಮಾಹಿತಿಯನ್ನು ತಿಳಿಸುತ್ತದೆ. ಅಷ್ಟೇ ಅಲ್ಲದೆ ಸುರಪುರದ ಸೈನ್ಯಕ ವ್ಯವಸ್ಥೆ, ರಾಜ ಲಾಂಛನ, ಚಲಾವಣೆಯಲ್ಲಿದ್ದ ನಾಣ್ಯಗಳು ಹಾಗೂ ಸೇವಾ ವರ್ಗದವರ ಜೊತೆಗೆ ಸುರಪುರ ಸಂಸ್ಥಾನದ ಕೇಂದ್ರ, ಪ್ರಾಂತೀಯ ಮತ್ತು ಸ್ಥಳೀಯಾಡಳಿತದ ಬಗೆಗೆ ಅಧ್ಯಯನಾತ್ಮಕ ಲೇಖನಗಳನ್ನು ಒಳಗೊಂಡ ಕೃತಿಯಾಗಿದೆ.

ಜೆ.ಎನ್. ಸರ್ಕಾರ್ ಅವರ ***'ಮಿಲಿಟರಿ ಹಿಸ್ಟರಿ ಆಫ್ ಇಂಡಿಯಾ'* (1960)** ಎಂಬ ಈ ಕೃತಿಯು ಭಾರತದ ಇತಿಹಾಸದಲ್ಲಿ ಯುದ್ಧ ಮತ್ತು ಯುದ್ಧ ಕೌಶಲ್ಯಗಳು, ಯುದ್ಧ ತಂತ್ರಗಳ ಬೆಳವಣಿಗೆಗಳ ಬಗ್ಗೆ ಬೆಳಕು ಚೆಲ್ಲುವ ಕೃತಿಯಾಗಿದೆ. ಇದರಲ್ಲಿ ಅಲೆಕ್ಸಾಂಡರ್‌ನ ಹೈಡಾಸ್ಪಸ್ ಕದನದಿಂದ ಕ್ರಿ.ಶ.18ನೆಯ ಶತಮಾನದ ಬ್ರಿಟಿಷ್‌ರ, ಮರಾಠರ ಹಾಗೂ ಅನೇಕ ಸ್ಥಳೀಯ ಮನೆತನಗಳ ನಡುವಿನ ಪ್ರಮುಖ ಯುದ್ಧಗಳನ್ನು ವಿಶ್ಲೇಷಿಸುವ ಮೂಲಕ ಭಾರತೀಯ ಯುದ್ಧ ತಂತ್ರಗಳನ್ನು ಒಳಗೊಂಡಿದೆ.

ಅಧ್ಯಯನದ ಆಕರಗಳು :

1. **ಪ್ರಾಥಮಿಕ**

ಪ್ರಸ್ತುತ ಸಂಶೋಧನ ಅಧ್ಯಯನಕ್ಕೆ ಆಕಾರಗಳು ತುಂಬಾ ಮಹತ್ವವಾದವುಗಳಾಗುತ್ತವೆ. ಈ ಆಕಾರಗಳಿಗೆ ಪೂರಕವಾಗಿ ಶಾಸನಗಳು, ಕೋಟೆ–ಕೊತ್ತಲಗಳು, ನಾಣ್ಯಗಳು, ಶಿಲ್ಪಗಳು, ವೀರ–ಗಲ್ಲುಗಳು, ಉತ್ಖನನಗಳು, ದೇವಸ್ಥಾನಗಳು, ಆಯುಧಗಳು, ಬ್ರಿಟಿಷ್ ಸಮಾಧಿಗಳು, ಸಾಹಿತ್ಯ ಕೃತಿಗಳು, ಪ್ರವಾಸಿ ವರದಿಗಳು ಇನ್ನೂ ಅನೇಕ ಪ್ರಾಥಮಿಕ ಆಕರಗಳು ಇಂದಿಗೂ ಲಭ್ಯವಿದ್ದು ಮಾಹಿತಿಯನ್ನು ನೀಡುತ್ತವೆ. ಪ್ರಮೂಕವಾಗಿ ಕ್ಷೇತ್ರಕಾರ್ಯದಲ್ಲಿ ಕಂಡುಬರುವ ಕೋಟೆಯ ಅವಶೇಷಗಳು, ಬುರುಜು, ಬತೇರಿಗಳು, ಫಿರಂಗಿಗಳು, ಶಸ್ತ್ರಾಸ್ತ್ರಗಳು ಮತ್ತು ನಾಯಕರ ಕಾಲದವಧಿಯ ಮೂಲ ಕೃತಿಗಳು, ಗ್ರಂಥಗಳು ಪೂರಕವಾದ ಮಾಹಿತಿಯನ್ನು ನೀಡುತ್ತವೆ. ಅಧ್ಯಯನದ ಅವಶ್ಯಕತೆಗೆ ಅನುಗುಣವಾಗಿ ಮಧ್ಯಕಾಲಿನ ಹಾಗೂ ಆಧುನಿಕ, ಸಮಕಾಲಿನ ಕಾವ್ಯಗಳನ್ನು ಮತ್ತು ಕೃತಿಗಳನ್ನು ಬಳಸಿಕೊಳ್ಳಲಾಗಿದೆ. ಇವುಗಳಲ್ಲಿ ಮುಖ್ಯವಾಗಿ ಲಿಂಗಣ್ಣ ಕವಿಯ 'ಕೆಳದಿ ನೃಪ ವಿಜಯಂ' ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯಂ' ಕನಕದಾಸರ 'ಮೋಹನ ತರಂಗಿಣಿ' ನಂಜುಂಡ ಕವಿಯ 'ರಾಮನಾಥ ಚರಿತೆ' ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ' ಹಾಗೂ ಪ್ರಾಚೀನ ಕೃತಿಯಾದ ಕೌಟಿಲ್ಯನ 'ಅರ್ಥಶಾಸ್ತ್ರ' ಎಂಬ ಪೂರಕ ಮಾಹಿತಿಗಳನ್ನು ಒದಗಿಸುವ ಸಾಹಿತ್ಯ ಕೃತಿಗಳನ್ನು ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ.

ಇದುವರೆಗಿನ ಸಂಶೋಧನಾ ಸಾಧನೆಯ ಸಮೀಕ್ಷೆಗಳಲ್ಲಿ ಪ್ರಥಮ ಸ್ಥಾನವು ಗ್ಯಾಸೆಟಿಯರ್‌ಗಳು ಅಥವಾ ಪ್ರಾದೇಶಿಕ ಮಾಹಿತಿ ಕೋಶಗಳು ಮಾಹಿತಿ ನೀಡುವ ಆಕರವಾಗಿವೆ. ಗ್ಯಾಸೆಟಿಯರ್‌ಗಳಲ್ಲಿ ನಿರ್ದಿಷ್ಟ ಭೌಗೋಳಿಕ ಪ್ರದೇಶವೊಂದರ ಬಗೆಗೆ ವಿದ್ಯಾವಂತ ವ್ಯಕ್ತಿಯೋರ್ವನು ಅರಿತುಕೊಳ್ಳಲು ಬಯಸುವ ಎಲ್ಲಾ ವಿಧವಾದ ಮಾಹಿತಿಯನ್ನು ಸಂಕ್ಷಿಪ್ತ ರೂಪದಲ್ಲಿ ಒದಗಿಸುವಂತ ಪ್ರಯತ್ನವಾಗಿದೆ. ಸೌತ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಎಫಿಗ್ರಾಫಿಕ್ ಇಂಡಿಕಾ, ಎಫಿಗ್ರಾಫಿಕ್ ಕರ್ನಾಟಕ ಇವುಗಳು ಅಲ್ಲದೆ ಹೈದ್ರಾಬಾದ್ ಕರ್ನಾಟಕದ ಬಗೆಗೆ ಇರುವ ಅನೇಕ ಡೈರೆಕ್ಟರಿಗಳು, ವಾರ್ಷಿಕ ಗ್ರಂಥಗಳು, ಪ್ರವಾಸಿ ಮಾರ್ಗದರ್ಶಿಗಳನ್ನು ಮತ್ತು ಕಥನಗಳನ್ನು ಹಾಗೂ ಅನೇಕ ರೀತಿಯ ಸುಲಭವಾಗಿ ದೊರಕದ ಅದೆಷ್ಟೋ ಮಾಹಿತಿಗಳನ್ನು ಸಂಗ್ರಹಿಸಿ ಸಂಶೋಧನೆಗೆ ಬಳಸಿಕೊಳ್ಳಲಾಗಿದೆ. ಸಂಶೋಧನೆಯ ಹಿತದೃಷ್ಟಿಯಿಂದ ಹೆಚ್ಚಾಗಿ ಶಾಸನಗಳನ್ನು, ಹಸ್ತಪ್ರತಿಗಳನ್ನು ಜೊತೆಗೆ ಸಮಕಾಲಿನ ಕನ್ನಡ, ಸಂಸ್ಕೃತ, ಉರ್ದು, ಪರ್ಶಿಯನ್, ಮರಾಠಿ, ಹಾಗೂ ಮೋಡಿ, ಹಿಂದಿ, ತೆಲುಗು, ಬ್ರಿಟಾನಿಕ್ ಇಂಗ್ಲೀಷ ಭಾಷಾ ಮೂಲಗಳಿಗೆ ಸಂಬಂಧಿತ ಕಾಗದ ಪತ್ರಗಳನ್ನು ಪೂರಕ ಆಕರಗಳನ್ನಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಅಧ್ಯಯನಕ್ಕೆ ಕರ್ನಾಟಕದಲ್ಲಿ ಪ್ರಸ್ತುತ ಕಂಡುಬರುವ ಕನ್ನಡ ವಿ,ವಿ ಹಂಪಿ, ಮೈಸೂರು ವಿ,ವಿ, ಕಲಬುರ್ಗಿ ವಿ,ವಿ, ಶ್ರೀಕೃಷ್ಣ ದೇವರಾಯ ವಿ,ವಿ ಬಳ್ಳಾರಿ, ಕರ್ನಾಟಕ ವಿ,ವಿ ಧಾರವಾಡ, ಬೆಂಗಳೂರು ವಿ,ವಿ, ಬೆಳಗಾವಿ ವಿ,ವಿ, ಜಾನಪದ ವಿ,ವಿ ಹಾವೇರಿ, ಮಂಗಳೂರು ವಿ,ವಿ, ಕುವೆಂಪು ವಿ,ವಿ ಶಿವಮೊಗ್ಗ, ತೂಮಕುರ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳನ್ನು ಜೊತೆಗೆ ಹೈದ್ರಾಬಾದ್ ಕರ್ನಾಟಕದ ವಿವಿಧ ಜಿಲ್ಲಾ ಮತ್ತು ತಾಲ್ಲೂಕು ಗ್ರಂಥಾಲಯಗಳಿಗೆ ಭೇಟಿನೀಡಿ ಸಂಶೋಧನ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪರಾಮರ್ಶಿಸಿ ಬಳಸಿಕೊಳ್ಳಲಾಗಿರುತ್ತದೆ. ಹಾಗೂ ಕರ್ನಾಟಕ ಪತ್ರಗಾರ ಇಲಾಖೆ ಬೆಂಗಳೂರು, ಹೆಚ್ಚಿನ ಮಾಹಿತಿಗಾಗಿ ಬೆಂಗಳೂರಿನಲ್ಲಿರುವ ಐ.ಸಿ.ಎಚ್.ಆರ್ ಕೇಂದ್ರಗಳಿಗೆ ಬೇಟಿನೀಡಿ ಮಾಹಿತಿ ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಂಡಿರುತ್ತೇನೆ. ಅಧ್ಯಯನಕ್ಕೆ ಸಬಂಧಿಸಿದಂತ ಈ ಭಾಗದ ಶಾಸನ ಸಂಪುಟಗಳಲ್ಲಿ ಸುರಪುರ ತಾಲ್ಲೂಕಿಗೆ ಸಂಬಂಧಿತ ಮೆಕೆಂಝಿಯವರ 17 ಶಾಸನ ಸಂಪುಟಗಳನ್ನು ಮತ್ತು ಸಗರನಾಡ ದರ್ಶನದಲ್ಲಿ ಪ್ರಕಟವಾದ ಎರಡು ಶಾಸನಗಳನ್ನು ಒಳಗೊಂಡು ಪಾಠ ದೋಷಗಳು ಬಹು ಸಂಖ್ಯೆಯಲ್ಲಿ ಕಂಡುಬರುವ ಕಾರಣ ಆ ಪಾಠಗಳನ್ನು ಇಲ್ಲಿ ಬಳಸಿಕೊಳ್ಳುವ ಕೆಲಸ ಆಮೆಗತಿಯಿಂದ ನಡೆದಿರುತ್ತದೆ ಆದರೂ ಪ್ರಸ್ತುತ ಲಭ್ಯವಿರುವ ಪ್ರಕಟಿತ ಶಾಸನಗಳನ್ನು ಅಧ್ಯಯನಕ್ಕೆ ಬಳಸಿಕೊಂಡು ಬರವಣಿಗೆಗೆ ಒಳಪಡಿಸಿರುತ್ತೇನೆ.

ಸುರಪುರ ತಾಲ್ಲೂಕಿನಲ್ಲಿ ಒಟ್ಟು 187 ಹಳ್ಳಿಗಳಿದ್ದು, ದೊರೆತಿರುವ ಹಾಗೂ ಇದುವರೆಗೆ ಅಲ್ಲಲ್ಲಿ ಪ್ರಕಟಿತಗೊಂಡ ಮತ್ತು ಪ್ರಕಟಿತಗೊಳ್ಳದೆ ಇರುವ ಶಾಸನಗಳ ಪಾಠವನ್ನು ಸಮಗ್ರವಾಗಿ ಸಂಗ್ರಹಿಸುವ

ಪ್ರಯತ್ನವನು ಮಾಡಲಾಗಿದೆ. ಈ ಭಾಗದ ಕೆಲವು ಶಾಸನಗಳು ಈ ಮೊದಲು ಪ್ರಕಟಿತವಾಗಿದ್ದರು ಪ್ರಸ್ತುತ ಆ ಸ್ಥಳದಲ್ಲಿ ಹುಡುಕುವ ಪ್ರಯತ್ನ ಕೈಗೊಳಲಾಗಿದೆ. ಬಾರ್ನೆಟರು ಪ್ರಕಟಿಸಿದ ಏವೂರಿನ ಒಂದು ಶಾಸನ ಕ್ರಿ.ಶ.1959–60ರಲ್ಲಿ ವರದಿಯಾಗಿದೆ. ಸಂಶೋಧನೆಯ ಮುಖ್ಯ ಭಾಗವಾದ ಸೈನಿಕ, ಆಡಳಿತ ಮತ್ತು ಕಂದಾಯ ವ್ಯವಸ್ಥೆಗೆ ಸಂಬಂಧಿಸಿದಂತೆ ಸಮಗ್ರವಾದ ಮಾಹಿತಿಯನ್ನು ಒದಗಿಸುವಂತಹ ಶಾಸನಗಳನ್ನು ಬಳಸಿಕೊಳ್ಳಲಾಗಿದೆ. ಮಹಾಪ್ರಬಂಧದ ವ್ಯಾಪ್ತಿಯಿಂದ ಸಾಂಸ್ಕೃತಿಕ ಸ್ಥಿತಿಗತಿಗಳನ್ನು, ಕಲೆ ಮತ್ತು ವಾಸ್ತು ಶಿಲ್ಪಗಳನ್ನು ಹೊರಗಿಡಲಾಗಿದೆ. ಈ ಮಹಾಪ್ರಬಂಧದಲ್ಲಿ ಸೈನಿಕ ಆಡಳಿತ ಮತ್ತು ಕಂದಾಯ ಪದ್ಧತಿಯ ಸ್ಥಿತಿಗತಿಗಳ ಬಗೆಗೆ ಬಹಳ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ. ಅದೇ ರೀತಿ ಹೈದ್ರಾಬಾದ್ ಕರ್ನಾಟಕದ ಕೇಂದ್ರ ಭಾಗವಾದ 'ಸಗರನಾಡಿನ' ಬಗೆಗೆ ಅತ್ಯಲ್ಪ ಮಾಹಿತಿ ನೀಡುವ ಗ್ರಂಥಗಳು ಅಂದರೆ ಇತಿಹಾಸ ಎನ್ನಬಹುದಾದ ಸ್ವಅನುಭವ ವೃತ್ತಾಂತಗಳು (Memoir), ಆತ್ಮ ಕಥನಗಳು (Autobiographies), ಜೀವನ ಚರಿತ್ರೆಗಳು (Biographies), ಹಾಗೂ ಈ ಪ್ರದೇಶದ ಕುರಿತು ಪ್ರಸ್ತುತದವರೆಗಿನ ಬಿಡಿಬಿಡಿಯಾದ ಸಂಶೋಧನಾ ಲೇಖನಗಳನ್ನು ಸಮೀಕ್ಷಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

2. ಅನುಷಂಗಿಕ

ಸುರಪುರ ಸಂಸ್ಥಾನ, ಕರ್ನಾಟಕ ರಾಜ್ಯ, ಮದ್ರಾಸ್ ಪ್ರೆಸಿಡೆನ್ಸಿ, ಕೊಡಗು, ಬಾಂಬೆ ಪ್ರೆಸಿಡೆನ್ಸಿ ಮತ್ತು ಹೈದ್ರಾಬಾದ್ ಸಂಸ್ಥಾನದ ಸರ್ಕಾರಗಳು ಹೊರಡಿಸುತ್ತಿದ್ದ ಸರ್ಕಾರಿ ಪ್ರಕಟಣೆಗಳನ್ನು ಕರ್ನಾಟಕ ರಾಜ್ಯ ಅಭಿಲೇಖಾಗಾರದಲ್ಲಿ ಸಂಗ್ರಹಿಸಿಡಲಾದ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ, ಇವುಗಳಲ್ಲಿ ಗೆಜೆಟ್‌ಗಳು, ಸರ್ಕಾರದ ನಡವಳಿಗಳು, ಅಧಿನಿಯಮಗಳು, ನಿಯಮಾವಳಿಗಳು, ಇಲಾಖಾ ಕೈಪಿಡಿಗಳು, ಆಡಳಿತ ವರದಿಗಳು, ಜನಗಣತಿ ವರದಿಗಳು, ಸಮಿತಿಗಳ ಮತ್ತು ಆಯೋಗಗಳ ವರದಿಗಳು ಇತ್ಯಾದಿಗಳನ್ನು ಒಳಗೊಂಡು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇಲಾಖೆ ಪ್ರಕಟಣೆಗಳು, ರಾಜರ ಮತ್ತು ಮಂತ್ರಿಗಳ, ಭಾಷಣಗಳು, ಮುದ್ರಿತ ದಾಖಲೆಗಳ ಪುಸ್ತಕಗಳನ್ನು ಬಳಸಿಕೊಳ್ಳಲಾಗಿದೆ. ಹೈದ್ರಾಬಾದ್ ಕರ್ನಾಟಕ ರಾಜ್ಯ ಅಭಿಲೇಖಾಗಾರದಲ್ಲಿ ಭೂಪಟಗಳ ಸಂಗ್ರಹವನ್ನು ಬಳಸಿಕೊಂಡಿರುತ್ತೇನೆ. ಅನೇಕ ಸಣ್ಣ–ಪುಟ್ಟ ಸಂಸ್ಥಾನಗಳಿಗೆ ಸಂಬಂಧಿಸಿದ ದಾಖಲೆಗಳು ಲಭ್ಯವಿದ್ದು, ಈ ಪ್ರದೇಶದಲ್ಲಿ ಇತ್ತೀಚೆಗೆ ತೆರೆದಿಟ್ಟ ಸ್ವಾತಂತ್ರ್ಯ ಹೋರಾಟಗಳಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದ ನಿಷೇಧಿತ ಪ್ರಕಟಣೆಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ಆಕರಗಳನ್ನಾಗಿ ಬಳಸಿರುತ್ತೇನೆ. ಅಧ್ಯಯನದ ಅವಶ್ಯಕತೆಗೆ ಅನುಗುಣವಾಗಿ ಪ್ರಾಚೀನ ಮತ್ತು ಸಮಕಾಲಿನ ಕೃತಿಗಳಲ್ಲಿರುವ ಅಗತ್ಯವಾದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

ಸುರಪುರ ಸಂಸ್ಥಾನದ ಕುರಿತಾಗಿ ಇಲ್ಲಿಯವರೆಗೆ ನಡೆದ ಅಧ್ಯಯನಗಳನ್ನು ಚಿತ್ರದುರ್ಗ, ಕೆಳದಿಯಂತಹ ಮನೆತನಗಳ ಕುರಿತಾದ ಅಧ್ಯಯನಗಳೊಂದಿಗೆ ಹೋಲಿಕೆಮಾಡಿ ನೋಡಿದರೆ ಬಹಳ ಕಡಿಮೆಯೆಂದೇ ಹೇಳಲಾಗುತ್ತದೆ. ಕ್ರಿ.ಶ.1948 ಸೆಪ್ಟೆಂಬರ್ 17ರವರೆಗೆ ನಿಜಾಮನ ಅಧಿನದಲ್ಲಿದ್ದ ಸುರಪುರ ಸಂಸ್ಥಾನ ಆರಂಭದಲ್ಲಿ ವಿಜಯನಗರದ ಅರಸರ ಆಡಳಿತದ ಸೈನ್ಯದಲ್ಲಿ ಸೇನಾಧಿಕಾರಿಗಳಾಗಿ ಕೆಲವು ಭಾಗದ ಅಧಿಕಾರವನ್ನು ಮಾತ್ರ ಹೊಂದಿದ್ದರು. ವಿಜಯನಗರ ಪತನವಾದ ಅನಂತರದಲ್ಲಿ ವಿವಿಧ ಭಾಗಗಳಲ್ಲಿ ನೆಲೆಸಿ ತಮ್ಮ ಅಸ್ಥಿತ್ವವನ್ನು ಕಾಪಾಡಿಕೊಂಡರು. ಅನಂತರದಲ್ಲಿ ಸುರಪುರ ಸಂಸ್ಥಾನಿಕರು ಬಿಜಾಪುರದ ಆದಿಲಷಾಹಿಗಳ ಮತ್ತು ಪೇಶ್ವೆಗಳೊಂದಿಗೆ ಸ್ನೇಹವನ್ನು ಬೆಳೆಸಿ ಅನಂತರ ಸ್ವತಂತ್ರರಾದರು. ಮುಂದೆ ಬ್ರಿಟಿಷ್‌ರ ಅನಂತರ ಹೈದ್ರಾಬಾದ್ ನಿಜಾಮರ ಅಧೀನದಲ್ಲಿ ಆಡಳಿತವನ್ನು ಮುನ್ನಡೆಸಿದರು ಎಂದು ತಿಳಿದುಬರುತ್ತದೆ. ಇದರಿಂದ ಹೆಚ್ಚಿನ ಆಕರಗಳು ವಿಜಯಪುರ ಆದಿಲ್‌ಶಾಹಿ, ಪುಣೆಯ ಪೇಶ್ವೆ, ಬ್ರಿಟಿಷ್ ಸರಕಾರ, ಹೈದ್ರಾಬಾದ್ ನಿಜಾಮರೊಂದಿಗೆ ನಡೆಸಿದ ವ್ಯವಹಾರಗಳಾಗಿದ್ದು ಅವುಗಳು ಉರ್ದು, ಪರ್ಷಿಯನ್, ಮರಾಠಿ, ಮೋಡಿ, ತೆಲುಗು, ಸಂಸ್ಕೃತ, ಬ್ರಿಟಾನಿಕ್ ಇಂಗ್ಲೀಷ್, ಹಾಗೂ ಕನ್ನಡ ಭಾಷೆಗಳಲ್ಲಿ ಬರವಣಿಗೆಗಳು ಇರುವುದರಿಂದ ಬೇರೆ ಬೇರೆ ಕಡೆಗಳಲ್ಲಿ ಚದುರಿಹೋಗಿವೆ. ಅದರಲ್ಲಿ ದಾಖಲೆಗಳನ್ನು ಆಧರಿಸಿ ಕೆಲವು ಕೃತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಅಧ್ಯಯನಗಳ ವಿಂಗಡಣೆ :

ಮೊದಲನೆ ಅಧ್ಯಾಯ : ಪೀಠಿಕೆ

ಮೊದಲನೆಯ ಅಧ್ಯಾಯವು ಅಧ್ಯಯನದ ಭೌಗೋಳಿಕ, ಚಾರಿತ್ರಿಕ ಮತ್ತು ರಾಜಕೀಯ ಹಿನ್ನೆಲೆ, ಉದ್ದೇಶ, ಮತ್ತು ವಿಧಾನ, ವ್ಯಾಪ್ತಿ, ಬರವಣಿಗೆಗಳ ಸಮೀಕ್ಷೆ, ಆಕರಗಳ ಬಗೆಗೆ ಅಧ್ಯಯನವನ್ನು ಮಾಡಲಾಗಿದೆ. ಸುರಪುರದ ನಾಯಕರು ತಮ್ಮ ಆಡಳಿತದ ಅಸ್ಥಿತ್ವಕ್ಕಾಗಿ ಈ ಭಾಗದಲ್ಲಿ ಕಂಡುಕೊಂಡ ಭೌಗೋಳಿಕ ನೆಲೆಗಳನ್ನು ಕುರಿತು ವಿಶ್ಲೇಷಣೆಗೆ ಒಳಪಡಿಸಿರುತ್ತೇನೆ. ಅನಂತರ ನಾಯಕರ ಚರಿತ್ರೆಗೆ ಸಂಬಂಧಿಸಿದಂತಹ ಬರವಣಿಗೆಗಳನ್ನು ಸಂಕ್ಷೇಪ್ತವಾಗಿ ಅಧ್ಯಯನಕ್ಕೆ ಒಳಪಡಿಸಿ ಭೂಪ್ರದೇಶದ ಕುರಿತು ಮಾಹಿತಿಯನ್ನು ಕಲೆಹಾಕಿ ತಾಲ್ಲೂಕಿನ ವಿಸ್ತೀರ್ಣ, ಮಣ್ಣಿನ ಆಕಾರ, ಪರಿಸರ, ವಾಯುಗುಣ, ನದಿಗಳು, ಹಳ್ಳ-ಕೊಳ್ಳಗಳು, ಪ್ರಾಣಿ ಮತ್ತು ಪಕ್ಷಿ ಸಂಕುಲಗಳ ಕುರಿತು ಅಧ್ಯಯನಕ್ಕೆ ಒಳಪಡಿಸಿರುತ್ತೇನೆ.

ಎರಡನೆಯ ಅಧ್ಯಾಯ : ನಾಯಕರ ಆರಂಭಿಕ ಏಳಿಗೆ

ಎರಡನೆಯ ಅಧ್ಯಾಯದಲ್ಲಿ ಸುರಪುರ ನಾಯಕರ ಪೂರ್ವಜರು ವಿಜಯನಗರ ಸಾಮ್ರಾಜ್ಯದ ಸಾಮಂತ ಅರಸರಾಗಿ ಕ್ರಿ.ಶ.1515 ರಿಂದ ಆಡಳಿತ ನಡೆಸಿರುವ ಬಗೆಗೆ ವಿಶ್ವೇಷಣೆಗೆ ಒಳಪಡಿಸಿಕೊಂಡು.

ಮುದಗಲ್, ಜಲದುರ್ಗ, ಕಕ್ಕೇರಿ, ನೀಲಕಂಠರಾಯನಗಡ್ಡಿಗಳು ಆರಂಭಿಕ ಏಳಿಗೆಗೆ ಕಾರಣವಾದ ನೆಲೆಗಳ ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕ್ರಿ.ಶ.1635ರಲ್ಲಿ ವಾಗಣಗೇರಿ ಕೋಟೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸಂಸ್ಥಾನ ಸ್ಥಾಪಸಿ ರಾಜಕೀಯವಾಗಿ ಆ ಪ್ರದೇಶದಲ್ಲಿ ಆಡಳಿತವನ್ನು ಭದ್ರಗೊಳಿಸಿದ ಕುರಿತು ಹಾಗೂ ಕ್ರಿ.ಶ.1705ರಲ್ಲಿ ಎರಡನೆಯ ರಾಜಧಾನಿ ಸುರಪುರ ಆಡಳಿತ ಮತ್ತು ಕ್ರಿ.ಶ.1858 ಫೆ.09ರ ಅನಂತರ ಸುರಪುರ ಸಂಸ್ಥಾನದ ಸ್ಥಿತಿಗತಿಯ ಕುರಿತು ಅಧ್ಯಯನವನ್ನು ನಡೆಸಲಾಗಿದೆ.

ಮೂರನೆಯ ಅಧ್ಯಾಯ : ಆಡಳಿತ ವ್ಯವಸ್ಥೆ

ಮೂರನೆಯ ಅಧ್ಯಾಯದಲ್ಲಿ ವಾಗಣಗೇರಿ ಕೋಟೆ ಮತ್ತು ಸುರಪುರವನ್ನು ರಾಜಧಾನಿಗಳನ್ನಾಗಿ ಕ್ರಿ.ಶ.1336 ರಿಂದ 1858ರವರೆಗೆ ಕೇಂದ್ರಾಡಳಿತವನ್ನಾಗಿ ಮಾಡಿಕೊಂಡು ಆಡಳಿತವನ್ನು ಕೈಗೊಂಡ ಅರಸರ ಸೈನಿಕ ವ್ಯವಸ್ಥೆ ಮತ್ತು ಸೇವಾವರ್ಗದವರ ಕುರಿತು ಅಧ್ಯಯನ ನಡೆಸಲಾಗಿದೆ. ಕೇಂದ್ರ, ಪ್ರಾಂತೀಯ ಮತ್ತು ಸ್ಥಳೀಯ ಆಡಳಿತಗಳಲ್ಲಿ ಸೈನಿಕರ ಮತ್ತು ಸೇವಾವರ್ಗದವರ ನೇಮಕಾತಿ ಮತ್ತು ಕಾರ್ಯಗಳ ಕುರಿತು ಅಧ್ಯಯನಕ್ಕೆ ಒಳಪಡಿಸಿರುತ್ತೇನೆ. ಕೇಂದ್ರಾಡಳಿತದಿಂದ ಸ್ಥಳೀಯ ಮಟ್ಟದ ನ್ಯಾಯಾಡಳಿತದಲ್ಲಿ ಕಾರ್ಯನಿರ್ವಹಿಸುವಂತ ಕುಲಾಚಾರಿಕೆಯ ವರ್ಗಗಳು ನಿರ್ಣಯಿಸುವ ನ್ಯಾಯಗಳ ಕುರಿತು ಅಧ್ಯಯನ ಕೈಗೊಂಡು ವಿಶ್ಲೇಷಣೆಗೆ ಒಳಪಡಿಸಿರುತ್ತದೆ.

ನಾಲ್ಕನೆಯ ಅಧ್ಯಾಯ : ಕಂದಾಯ ಪದ್ದತಿ

ನಾಲ್ಕನೆಯ ಅಧ್ಯಾಯದಲ್ಲಿ ಸುರಪುರ ಸಂಸ್ಥಾನದ ಭೂಪ್ರದೇಶವು ಫಲವತ್ತಾದ ಭೂಮಿಯಾಗಿದ್ದು ಕೃಷಿ ಚಟುವಟಿಕೆಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ಪ್ರದೇಶದಲ್ಲಿ ಆಡಳಿತವನ್ನು ಕೈಗೊಂಡ ನಾಯಕರು ಎಷ್ಟು ಬಗೆಯ ಕಂದಾಯ ಪದ್ದತಿಗಳನ್ನು ಪಾಲಿಸುತ್ತಿದ್ದರೆಂಬುದರ ಕುರಿತು ಅಧ್ಯಯನ ನಡೆಸಲಾಗಿದೆ. ಕಂದಾಯ ಪದ್ದತಿಯಲ್ಲಿ ಭೂ ಕಂದಾಯದ ವಿವಿಧ ಮೂಲಗಳನ್ನು ಕುರಿತು ಹಾಗೂ ಭೂ ತೆರಿಗೆಗಳಲ್ಲಿನ ವಿನಾಯಿತಿ ಕುರಿತು ಅಧ್ಯಯನಕ್ಕೆ ಒಳಪಡಿಸಿರುತ್ತೇನೆ. ಕೇಂದ್ರ, ಪ್ರಾಂತೀಯ ಮತ್ತು ಸ್ಥಳೀಯಾಡಳಿತಗಳಲ್ಲಿ ಕಂಡುಬರುವ ವ್ಯಾಪಾರ ಮತ್ತು ವಾಣಿಜ್ಯ ತೆರಿಗೆಗಳನ್ನು ವಿಶ್ಲೇಷಣೆಗೆ ಒಳಪಡಿಸಿ, ವೃತ್ತಿಪರ ಮತ್ತು ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ತೆರಿಗೆಗಳನ್ನು ವಿಧಿಸುವಿಕೆ ಮತ್ತು ನಿರ್ವಹಿಸುವಿಕೆಯ ಕುರಿತು ವಿವರಿಸಲಾಗಿದೆ. ಕರಕುಶಲ, ಧಾರ್ಮಿಕ ಹಾಗೂ ಇತರೇ ತೆರಿಗೆ ಪದ್ದತಿ ಮತ್ತು ವಿನಾಯಿತಿಗಳ ದಾಖಲಾತಿ ಪತ್ರಗಳ ಸಂರಕ್ಷಣೆಯನ್ನು ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಐದನೆಯ ಅಧ್ಯಾಯ : ಸೈನಿಕ ಆಡಳಿತ

ಐದನೆಯ ಅಧ್ಯಾಯನದಲ್ಲಿ ಸುರಪುರ ಸಂಸ್ಥಾನದ ನಾಯಕರು ಕೇಂದ್ರ, ಪ್ರಾಂತೀಯ ಮತ್ತು ಸ್ಥಳೀಯಾಡಳಿತದ ವ್ಯಾಪ್ತಿಯಲ್ಲಿ ಕೋಟೆ–ಕೊತ್ತಲಗಳನ್ನು, ಕಾವಲು ಗೋಪುರಗಳನ್ನು, ಬೇಟೆ ಮಹಲ್‌ಗಳನ್ನು ನಿರ್ಮಿಸಿಕೊಂಡು ವಿವಿಧ ಸ್ಥಳಗಳಲ್ಲಿ ಸೈನಿಕರನ್ನು ನೇಮಕಮಾಡಿ ಆಡಳಿತಕ್ಕೆ ರಕ್ಷಣೆಯನ್ನು ನೀಡಿರುವ ಕುರಿತು ಅಧ್ಯಯನ ನಡೆಸಲಾಗಿದೆ. ಸಂಸ್ಥಾನವು ಬಲಿಷ್ಠವೆಂದು ಗುರುತಿಕೊಳ್ಳಲು ಸೈನಿಕ ಮತ್ತು ಆರ್ಥಿಕ ವ್ಯವಸ್ಥೆ ಮತ್ತು ಗಡಿ ಭಾಗಗಳು ತುಂಬಾ ಮುಖ್ಯವಾಗುತ್ತವೆ. ಆದ್ದರಿಂದ ಸ್ಥಳೀಯ ಮಟ್ಟದವರೆಗೆ ಕಂಡುಬರುವ ಸೈನಿಕ ವುವಸ್ಥೆ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ನಾಯಕರು ತಮ್ಮ ಸೈನ್ಯ ವ್ಯವಸ್ಥೆಯಲ್ಲಿ ಕಾಲ್ದಳ, ಅಶ್ವದಳ, ಗಜದಳ ಪಡೆಗಳನ್ನು ವರ್ಗೀಕರಿಸುವ ಹಾಗೂ ವಿವಿಧ ಪಡೆಗಳ ಕೌಶಲ್ಯಗಳ ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸುರಪುರ ಸಂಸ್ಥಾನದ ಆಡಳೀತದಲ್ಲಿ ಸೈನಿಕರಾಗಿ ಸೇವೆಸಲ್ಲಿಸಿದಂತ ವಿವಿಧ ವರ್ಗಗಳ ಮನೆತನಗಳನ್ನು ಗುರುತಿಸುವ ಮೂಲಕ ಸೈನಿಕರ ವೇತನ, ಭತ್ಯೆ ಮತ್ತು ಸೈನಿಕರಿಗೆ ನೀಡುವ ಇತರೆ ಸೌಲಭ್ಯಗಳನ್ನು ಕುರಿತು ವಿಶ್ಲೇಷಣೆಗೆ ಒಳಪಡಿಸಿರುತ್ತೇನೆ.

ಆರನೆಯ ಅಧ್ಯಾಯ : ಸಮಾರೋಪ

(ಅಧ್ಯಯನದ ಫಲಿತಗಳನ್ನು ಕುರಿತು ವಿವರಣೆಯನ್ನು ನೀಡಲಾಗಿದೆ.)

ಪ್ರಸ್ತುತ ಸಂಶೋಧನೆಯು ಕ್ರಿ.ಶ.1565ನೆಯ ಶತಮಾನದಲ್ಲಿ ಜರುಗಿದ ಐದು (5) ಶಾಹಿ ಮನೆತನಗಳ ಮತ್ತು ವಿಜಯನಗರ ಸಾಮ್ರಾಜ್ಯದ ನಡುವಿನ ಯುದ್ಧದಲ್ಲಿ ವಿಜಯನಗರವು ಅವನತಿ ಹೊಂದುತ್ತದೆ. ಅನಂತರದಲ್ಲಿ ಆ ಭಾಗದಲ್ಲಿ ಉಂಟಾಗಿದ್ದ ಅರಾಜಕತೆಯನ್ನು ತೊಲಗಿಸಲು ಸಾಮಂತರಾದ ಸುರಪುರದ ನಾಯಕರ ವಂಶಸ್ಥರು ಸ್ಥಳೀಯ ನಾಯಕತ್ವವನ್ನು ವಹಿಸಿಕೊಳ್ಳುತ್ತಾರೆ. ವಿಜಯನಗರೋತ್ತರ ಕಾಲದ ಆಡಳಿತದಲ್ಲಿ ಸಗರನಾಡಿನ ಪ್ರದೇಶಗಳ ಮೇಲಿನ ಮುಸ್ಲಿಂ ಅರಸರ ಮತ್ತು ಸರದಾರರ ದಬ್ಬಾಳಿಕೆಗಳನ್ನು ತಡೆಹಿಡಿದು, ಸ್ಥಳೀಯ ಜನಾಂಗಗಳಲ್ಲಿ ಜರುಗುವಂತಹ ಸಾಮಾಜಿಕ ಮತ್ತು ಧಾರ್ಮಿಕ ಕಲಹಗಳನ್ನು ನಿಯಂತ್ರಿಸಿ, ಆ ಭಾಗದ ಜನತೆಗೆ ಸಂರಕ್ಷಣೆ ನೀಡುವುದರ ಮೂಲಕ ಸ್ಥಳೀಯ ಜನರ ಪ್ರೀತಿ, ವಿಶ್ವಾಸವನ್ನು ಗಳಿಸಿಕೊಂಡರು. ಅಷ್ಟೇ ಅಲ್ಲದೆ ನೆರೆ–ಹೊರೆಯ ರಾಜ್ಯಗಳ ಅರಸ ಮತ್ತು ಸರದಾರರೊಂದಿಗೆ ಉತ್ತಮವಾದ ಸ್ನೇಹ ಸಂಬಂಧಗಳನ್ನು ಬೆಳೆಸಿಕೊಂಡು ಸಗರನಾಡಿನಲ್ಲಿ ತಮ್ಮ ಆಡಳಿತವನ್ನು ಕಾಪಾಡಿಕೊಂಡು ಸಂಸ್ಥಾನವನ್ನು ಸ್ಥಾಪಿಸಲು ನಾಯಕ ಮನೆತನದ ಅನೇಕ ಅರಸರು ಶಕ್ತಿಮೀರಿ ಪ್ರಯತ್ನಿಸಿದರೆಂಬುದು ಅವರು ನೀಡಿದ ಆಡಳಿತ ಕೊಡುಗೆಗಳಿಂದ ತಿಳಿಯುತ್ತೇವೆ.

ವಿಜಯನಗರೋತ್ತರ ಕಾಲದ ಅಂದರೆ ಕ್ರಿ.ಶ.1565ರ ಅನಂತರ ಸಗರನಾಡಿನಲ್ಲಿ ಸ್ವತಂತ್ರ ಆಳ್ವಿಕೆಯನ್ನು ಕೈಗೊಂಡ ಸುರಪುರ ಸಂಸ್ಥಾನದ ಆಡಳಿತವನ್ನು ಮೂರು ಹಂತಗಳನ್ನಾಗಿ ವಿಭಜಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿರುತ್ತದೆ. ಕ್ರಿ.ಶ.1566 ರಿಂದ 1630ರವರೆಗೆ ಕಕ್ಕೇರಿಯೊಂದಿಗೆ 1.ನೀರದೇವರ ಗಡ್ಡಿ, 2.ದೇವರ ಗಡ್ಡಿ 3.ಜಂಗಿನ ಗಡ್ಡಿ 4.ಮೇಲಿನ ಗಡ್ಡಿ 5.ನೀಲಕಂಠರಾಯನ ಗಡ್ಡಿ, 6.ಬೆಣಚಿನ ಗಡ್ಡಿಗಳನ್ನು ತಮ್ಮ ಆಡಳಿತಕ್ಕೆ ಒಳಪಡಿಸಿ ಅರವತ್ತೈದು ವರ್ಷಗಳ ಕಾಲ ಈ ಪ್ರದೇಶಗಳಲ್ಲಿ ಆಳ್ವಿಕೆಯನ್ನು ಕೈಗೊಂಡರು ಎಂಬುದನ್ನು ಗುರುತಿಸಿ ಸ್ಪಷ್ಟಪಡಿಸಲಾಗಿದೆ. ಅನಂತರ ಕಪಟರಾಳ ಕೃಷ್ಣರಾಯರು ಸಂಗ್ರಹಿಸಿದಂತಹ ಹಸ್ತಪ್ರತಿ 1, 2, 3ರಲ್ಲಿ ಉಲ್ಲೆಖಿಸಿದಂತೆ ರಾಜ ಗಡ್ಡಿಪಿಡ್ಡನಾಯಕ ಮತ್ತು ಅಣ್ಣನಾದ ರಾಜ ಲಿಂಗನಾಯಕನು ಬೇರೆ ಬೇರೆಯಾಗಿ ರಾಜ ಗಡ್ಡಿಪಿಡ್ಡನಾಯಕನು ವಾಗಣಗೇರಿ ಕೋಟೆಯ ಸ್ಥಾಪಕನಾಗಿ ಆಳ್ವಿಕೆಯನ್ನು ಕೈಗೊಳ್ಳುತ್ತಾನೆ. ಕ್ರಿ.ಶ.1631 ರಿಂದ 1705ರವರೆಗೆ ಸುಮಾರು ಎಪ್ಪತ್ತೈದು (75) ವರ್ಷಗಳ ಕಾಲ ಈ ಕೋಟೆಯನ್ನು ಮೂರು (3) ಜನ ನಾಯಕರು ತಮ್ಮ ಆಳ್ವಿಕೆಗೆ ಒಳಪಡಿಸಿರುವುದರ ಕುರಿತು ವಿವರವಾದಂತಹ ಮಾಹಿತಿಯನ್ನು ನೀಡಲಾಗಿದೆ. ಔರಂಗಜೇಬನ ದಕ್ಷಿಣ ಭಾರತದ ದಂಡೆಯಾತ್ರೆಯ ಅನಂತರ ಕ್ರಿ.ಶ.1706 ರಿಂದ 1858 ಫೆ.09ರವರೆಗೆ ಈ ನಾಯಕರು ಸುತ್ತಲೂ ಬೆಟ್ಟ–ಗುಡ್ಡಗಳಿಂದ ಆವರಿಸಲ್ಪಟ್ಟು ಮಧ್ಯೆ ಸಮತಟ್ಟಾದ ಭೂ ಪ್ರದೇಶದಿಂದ ಕೂಡಿದ ಸ್ಥಳವಾದ ಸುರಪುರವನ್ನು ತಮ್ಮ ಎರಡನೆಯ ರಾಜಧಾನಿಯನ್ನಾಗಿ ಮಾಡಿಕೊಂಡು ಸು.153 ವರ್ಷಗಳ ಕಾಲ ಆಳ್ವಿಕೆಯನ್ನು ಕೈಗೊಂಡ ಅರಸರ ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿರುತ್ತದೆ.

ಕ್ರಿ.ಶ.16ನೇ ಶತಮಾನದಿಂದ ನಾಯಕರು ವಾಗಣಗೇರಿ ಕೋಟೆಯನ್ನು ಮೊದಲನೆ ರಾಜಧಾನಿಯನ್ನಾಗಿ ಮಾಡಿಕೊಂಡು ಸಂಸ್ಥಾನವನ್ನು ಸ್ಥಾಪಿಸಿದರು. ಇವರ ಕಾಲದ ಸೈನ್ಯ, ಅದರ ಆಡಳಿತ, ಯುದ್ಧ ಬಗೆಗಳು, ಯುದ್ಧದ ಸಮಯದಲ್ಲಿ ಕೈಗೊಳ್ಳುತ್ತಿದ್ದ ಪೂರ್ವ ಸಿದ್ದತೆಗಳು, ಆಚರಿಸುವಂತ ಪದ್ದತಿಗಳು, ಸೇನಾ ಶಿಬಿರಗಳು, ವ್ಯೂಹ ರಚನೆ ಹೋರಾಟದ ಆಯಾಮಗಳು, ಯುದ್ಧದ ಅನಂತರ ಶತ್ರುಗಳನ್ನು ಮತ್ತು ಸೈನಿಕರನ್ನು ನೋಡುವ ರೀತಿ–ನೀತಿ ಇಂತಹ ಅನೇಕ ಅಂಶಗಳನ್ನು ಅಧ್ಯಯನದಿಂದ ಕಂಡುಕೊಂಡರೂ, ಆ ಅವಧಿಯ ಯುದ್ಧಗಳಲ್ಲಿ ಅನುಸರಿಸುತ್ತಿದ್ದ ಯುದ್ಧನೀತಿ ಮತ್ತು ಅದರ ಪರಿಣಾಮಗಳನ್ನು ತಿಳಿದುಕೊಳ್ಳುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ವಾಗಣಗೇರಿ ಕೋಟೆಯು ರಾಜ ಹಸರಂಗಿ ಪಾಮನಾಯಕನ ಕಾಲದಿಂದ ನಿರಂತರವಾಗಿ ಮೊಗಲ ಸರದಾರರ ಮತ್ತು ಔರಂಗಜೇಬನ ದಾಳಿಗಳಿಗೆ ಒಳಗಾಗಿ ಕೋಟೆಯು ಶಿಥಿಲವಾಗುತ್ತದೆ. ಅನಂತರದಲ್ಲಿ ಸುರಪುರವನ್ನು ಎರಡನೆಯ ರಾಜಧಾನಿಯನ್ನಾಗಿ ಕ್ರಿ.ಶ.1706ರಲ್ಲಿ ಆಡಳಿತವನ್ನು ಮುನ್ನಡೆಸಿದ ನಾಯಕರ ಸೈನ್ಯ ವ್ಯವಸ್ಥೆಯು ನಿಯಮ, ಕಟ್ಟಳೆ, ಶಿಸ್ತು, ತರಬೇತಿಗಳಿಂದ ಸಜ್ಜುಗೊಳಿಸಿ

ವ್ಯವಸ್ಥಿತವಾದ ಆಡಳಿತ ಘಟಕಗಳು. ಸೈನ್ಯ ಪಡೆಯು ರಾಜ್ಯದ ಸಪ್ತಾಂಗಗಳಲ್ಲಿ ಗುರುತಿಸಿಕೊಳ್ಳಲು ಅದರ ಪ್ರಾಮುಖ್ಯತೆ ಮತ್ತು ಅನಿವಾರ್ಯತೆಗಳು ಕಾರಣವಾಗುತ್ತವೆ. ಅಂದಿನ ಕಾಲದ ಸೈನ್ಯ ಮತ್ತು ಯುದ್ಧಗಳು ಪ್ರಾಕೃತಿಕ ಪರಿಸರ, ಸಮಕಾಲಿನ ರಾಜಕೀಯ ಸ್ಪರ್ಧೆಗಳು ಹಾಗೂ ಅನಂತರದ ಅವಧಿಯಲ್ಲಿ ಬದಲಾಗುವಂತಹ ಯುದ್ಧ ಕೌಶಲ್ಯಗಳಿಗೆ ಅನುಗುಣವಾಗಿ ಬದಲಾವಣೆಗೊಳ್ಳುತ್ತಿದ್ದವು. ಇದರಿಂದ ಸುರಪುರ ಸಂಸ್ಥಾನವು ಒಂದು ಅಚ್ಚುಕಟ್ಟಾದ ಮತ್ತು ಬಲಿಷ್ಠವಾದ ಸೈನ್ಯವನ್ನು ಕಟ್ಟಿಕೊಳ್ಳಲು ಕ್ರಿ.ಶ.1636ರಲ್ಲಿ ಬಿಜಾಪುರದ ಆದಿಲ್‌ಶಾಹಿಯ ನೆರವು ಮತ್ತು ಅನಂತರ ಮೊಗಲರ ನಿರಂತರ ಆಕ್ರಮಣಗಳು ಪ್ರಮುಖ ಕಾರಣವಾದವು.

ಸೈನಿಕ ಪಡೆಗಳು ಸಂಸ್ಥಾನಕ್ಕೆ ಎದುರಾದಂತಹ ಯುದ್ಧಗಳಲ್ಲಿ ಅನುಸರಿಸುತ್ತಿದ್ದ ನೀತಿ–ನಿಯಮಗಳನ್ನು ಐತಿಹಾಸಿಕ ಅವಧಿಯಿಂದಲೂ ಬಳಕೆಮಾಡುವುದು ಸತ್ಯಸಂಗತಿಯಾಗಿದೆ. ಆ ಸಮಯದಲ್ಲಿ ನೀತಿಗಳನ್ನು ಅನುಸರಿಸುವುದು ನ್ಯಾಯ ಇಲ್ಲವೆ ಧರ್ಮ ಯುದ್ಧಗಳಲ್ಲಿ ಹಾಗೂ ಶೌರ್ಯ ಮತ್ತು ಸಾಹಸಗಳ ಸೂಚಕಗಳಾಗಿ ಕಂಡುಬರುತ್ತಿದ್ದವು. ನಾಯಕರು ಆರಂಭದಿಂದ ಮೊಗಲ್, ಮರಾಠ ಮತ್ತು ಇತರೆ ಸ್ಥಳೀಯ ಅರಸರೊಂದಿಗೆ ನಡೆಸುವಂತಹ ಯುದ್ಧಗಳು ಆಕ್ರಮಣಕಾರಿ ಅಥವಾ ಕೂಟ ಯುದ್ಧಗಳಾದ್ದು, ಇಲ್ಲಿ ಹೆಚ್ಚಾಗಿ ಧಾರ್ಮಿಕ ಯುದ್ಧಗಳು ಕಂಡುಬರುತ್ತಿರಲಿಲ್ಲ. ರಾಜ ಮೊಂಡಗೈ ವೆಂಕಟಪ್ಪನಾಯಕ ಮತ್ತು ಇತರೆ ರಾಜರು ಕೈಗೊಂಡ ಯುದ್ಧ ಸಂದರ್ಭಗಳಲ್ಲಿನ ನ್ಯಾಯದ ಕ್ರಮಗಳನ್ನು ಯುದ್ಧದ ಅವಧಿಯಲ್ಲಿ ಹಾಗೂ ಅನಂತರದಲ್ಲಿ ಪಾಲಿಸುತ್ತಿರುವುದನ್ನು ಕಾಣುತ್ತೇವೆ.

ಸುರಪುರ ಸಂಸ್ಥಾನವು ಮಧ್ಯಮ ಗಾತ್ರದ ಮತ್ತು ಬಲಿಷ್ಠ ಸೈನಿಕ ಪಡೆಗಳನ್ನು ಹೊಂದಿತ್ತು ಎಂಬುದಕ್ಕೆ ವಿವಿಧ ಯುದ್ಧಗಳ ಉಲ್ಲೇಖಗಳಿಂದ ತಿಳಿದುಬರುತ್ತದೆ. ಈ ರೀತಿಯ ಹದಿನಾಲ್ಕು (14) ಕೇರಿಗಳಲ್ಲಿ ವಿವಿಧ ವರ್ಗಗಳನ್ನು ಒಳಗೊಂಡ ಸೈನಿಕ ಪಡೆಯು ಕೇಂದ್ರ, ಪ್ರಾಂತೀಯ ಮತ್ತು ಸ್ಥಳೀಯ ಆಡಳಿತಗಳಲ್ಲಿ ನೇಮಕಮಾಡಿ ರಕ್ಷಣೆಯನ್ನು ಒದಗಿಸಿದ್ದರು. ನಾಯಕರು ಆಡಳಿತದಲ್ಲಿ ಜಾರಿಗೊಳಿಸಿದ ನ್ಯಾಯಯುತ ಸೇವೆಯೊಂದಿಗೆ ನಿಷ್ಠೆ, ಪ್ರಾಮಾಣಿಕತೆಗಳನ್ನು ಮೈಗೂಡಿಸಿಕೊಂಡ ವ್ಯಕ್ತಿಗಳನ್ನು ನೇಮಕಾತಿ ಮಾಡುವಂತ ಪದ್ದತಿಗಳನ್ನು ಅನುಸರಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಈ ನಾಯಕರ ಕಾಲದಲ್ಲಿ ಸಣ್ಣ ಪ್ರಮಾಣದ ಜನಸಂಖ್ಯೆಯನ್ನು ಹೊಂದಿದ್ದ ಕೂಟಗಾರ ಅಥವಾ ಕೊಟಗಾರ ಎಂಬ ಸೈನಿಕ ಪಡೆಯು ತನ್ನ ಶಕ್ತಿ ಮತ್ತು ಯುಕ್ತಿಗಳನ್ನು ಪ್ರದರ್ಶಿಸುವ ಮೂಲಕ ಸೈನಿಕರ ಬಲ, ಶೌರ್ಯ, ಸಾಹಸಗಳನ್ನು ತಿಳಿಸಿಕೊಡುತ್ತದೆ. ಇವರು ಸಂಘಟಿಸುವ ಮತ್ತು ಯುದ್ಧಗಳಿಗೆ ಸಜ್ಜುಗೊಂಡು ನಾಂದಿಹಾಡುವ ಕೆಲಸಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿತು. ಇಂತಹ ಕಾರ್ಯಗಳಿಂದ ಸೈನಿಕ ಪಡೆಗಳ

ರಕ್ಷಣೆ ಮತ್ತು ಸಂಸ್ಥಾನಕ್ಕೆ ಧನಸಂಪತ್ತು ಕೂಡ ಅಧಿಕಗೊಂಡು ಸಗರನಾಡಿನ ಉದ್ದಗಲಕ್ಕೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಭದ್ರಗೊಳಿಸಲು ಸಾಧ್ಯವಾಯಿತ್ತೆಂದು ತಿಳಿದುಬರುತ್ತದೆ.

ಸುರಪುರ ನಾಯಕರ ಸೇನಾ ಪಡೆಗಳಲ್ಲಿ ಅಶ್ವದಳ, ಕಾಲ್ದಳ, ಗಜ ದಳಗಳು ಪ್ರಮುಖವಾಗಿತ್ತು. ಹೈದ್ರಾಬಾದ್ ಕರ್ನಾಟಕ ಭಾಗದ ಆಡಳಿತ ವ್ಯಾಪ್ತಿಯಲ್ಲಿ ಸ್ಥಳೀಯ ಜಹಗೀರದಾರರಿಗೆ ಮತ್ತು ಸೈನಿಕ ಸರದಾರರಿಗೆ ಇತರೇ ದಳಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ಈ ನಾಯಕರು ನೀಡಿದ್ದರು. ಯುದ್ಧದ ಸಂದರ್ಭಗಳು ಎದುರಾದಾಗ ತಕ್ಷಣದಲ್ಲಿ ಅಶ್ವದಳ ಸೇನೆಯಿಂದ ಚಾಲನೆ ನೀಡಿ ಫಲಿತಾಂಶಗಳ ಜೊತೆಗೆ ದುಷ್ಪರಿಣಾಮಗಳನ್ನು ಕಂಡುಕೊಳ್ಳಲು ದಾರಿಯಾಗುತ್ತಿತು. ಇದರಿಂದ ಸಂಸ್ಥಾನದ ಯುದ್ಧಗಳಲ್ಲಿ ಅರೇಬಿಯಾ, ಪರ್ಶಿಯಾ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದ ಹೈದ್ರಾಬಾದ್ ನಿಜಾಮ ಮತ್ತು ಬಹುಮನಿ ರಾಜ್ಯಗಳಿಂದ ತರಬೇತಿ ಹೊಂದಿದ ಕುದುರೆಗಳನ್ನು ನಾಯಕರು ಆಮದು ಮಾಡಿಕೊಳ್ಳುತ್ತಿದ್ದರು. ಕ್ರಿಸ್ತಪೂರ್ವ ಕಾಲದಿಂದ ಕ್ರಿ.ಶ.15ನೆಯ ಶತಮಾನದವರೆಗಿನ ಕಾಲವಧಿಯಲ್ಲಿ ಸಂಪ್ರದಾಯದ ಬೆಳವಣಿಗೆಯಾಗಿರುವುದು ಕಂಡುಬರುತ್ತದೆ. ಈ ಅವಧಿಯಲ್ಲಿ ಕತ್ತಿ–ಗುರಾಣಿ, ಬಿಲ್ಲು–ಬಾಣ, ಈಟಿ–ಕಠಾರಿಗಳಂತಹ ಶಸ್ತ್ರಾಸ್ತ್ರಗಳನ್ನು ಗುರುತಿಸಬಹುದು. ಇಂತಹ ಸಮಯವನ್ನು ಆಯುಧಗಳಲ್ಲಿ ಮಾರ್ಪಾಡುಗೊಳ್ಳದಂತ ತಟಸ್ಥ ಕಾಲವೆಂಬುದನ್ನು ಗುರುತಿಸಬಹುದು. ಅನಂತರದಲ್ಲಿ ವಿಜಯನಗರದ ಮತ್ತು ವಿಜಯನಗರೋತ್ತರ ಕಾಲವಧಿಯ ಆಡಳಿತದಲ್ಲಿ ಸಾಮ್ರಾಜ್ಯದ ಪ್ರಭಾವಕ್ಕೆ ಒಳಗಾದ ನಾಯಕರು ಮಹಮ್ಮದಿಯರಿಂದ ಮತ್ತು ಪಾಶ್ಚಾತ್ಯರಿಂದ ನವೀಕರಣಗೊಳಿಸಿದ ಸಿಡಿಮದ್ದಿನ ಉಪಕರಣಗಳನ್ನು ಹೆಚ್ಚಾಗಿ ಬಳಕೆ ಮಾಡಿರುವುದನ್ನು ಕಾಣುತ್ತೇವೆ.

ಆಧುನಿಕ ಕಾಲದ ಸಿಡಿಮದ್ದಿನ ಆಯುಧಗಳಾದ ಬಂದೂಕು ಮತ್ತು ಫಿರಂಗಿಗಳ ಉಪಯೋಗಗಳಲ್ಲಿ ಹಾಗೂ ಸೈನಿಕ ಪಡೆ ಮತ್ತು ಯುದ್ಧಗಳಲ್ಲಿ ಮಹತ್ತರವಾದ ಬದಲಾವಣೆಗಳು ಕಂಡುಬಂದವು. ಇಂತಹ ಶಸ್ತ್ರಾಸ್ತ್ರಗಳ ಬಳಕೆಯಿಂದ ಸಂಪ್ರದಾಯವಾಗಿ ಬಳಕೆಯಲ್ಲಿದ್ದ ಕಾಲಾಳಿಗೆ ಕಾಲಾಳು, ಕುದುರೆಗೆ ಕುದುರೆ, ಆನೆಗೆ ಆನೆ ಎಂಬ ನ್ಯಾಯ, ನೀತಿ, ಧರ್ಮದ ಹೊರಾಟಗಳು ಮರೆಯಾಗಿರುವುದಂತು ಸತ್ಯ. ಸುರಪುರ ನಾಯಕರ ಪೂರ್ವ ಅವಧಿಯ ಇತಿಹಾಸದಲ್ಲಿ ಕತ್ತಿ, ಗುರಾಣಿ, ಈಟಿ, ಕಠಾರಿಯಂತಹ ಅನೇಕ ಉಪಕರಣಗಳನ್ನು ಬಳಸಿಕೊಂಡು ಎದುರಾದಂತಹ ಎರಡು ಸೈನ್ಯಗಳು ಯುದ್ಧದ ರಣರಂಗದಲ್ಲಿ ಹೋರಾಟದ ಮುಖಾಮುಖಿಯನ್ನು ಯುದ್ಧಗಳಲ್ಲಿ ಅನುಸರಿಸುತ್ತಿದ್ದರು. ಅನಂತರ ಬದಲಾವಣೆಗೊಂಡ ಆಧುನಿಕ ಕಾಲವಧಿಯಲ್ಲಿ ಹೆಚ್ಚಾಗಿ ಬಳಕೆಗೆಬಂದ ಬಂದೂಕು, ಫಿರಂಗಿಗಳು, ಸಿಡಿಮದ್ದುಗಳಂತ ಆಯುಧಗಳು ಎರಡರಿಂದ ಮೂರು ಕಿ.ಮೀಟರ್ ದೂರದಿಂದ ತನ್ನ ಶತ್ರು ಸೇನೆಯ ಮೇಲೆ ದಾಳಿಯನ್ನು ಕೈಗೊಳ್ಳುವ ಸಾಮರ್ಥ್ಯವನ್ನು ಹೊಂದಿದ ಕಾರಣ ಪ್ರಾಚೀನ ಮತ್ತು

ಮಧ್ಯಯುಗಿನ ಕಾಲದ ಮುಖಾಮುಖಿ ಹಾಗೂ ಧರ್ಮ ಯುದ್ಧಗಳು ತಮ್ಮ ಮಹತ್ವವನ್ನು ಕಳೆದುಕೊಂಡವು. ಈ ಯುದ್ಧಗಳು ಕಣ್ಮರೆಯಾಗಿ ಅಂತರ ಯುದ್ಧಗಳು ಮುನ್ನೆಲೆಗೆ ಬಂದಂತಹ ಕಾಲವನ್ನು ಹೊಸದಾದ ಯುದ್ಧದ ಅವಧಿಯೆಂದು ಹೇಳಲಾಗುತ್ತದೆ.

ಸುರಪುರದ ನಾಯಕರು ನಡೆಸಿದಂತಹ ಯುದ್ಧಗಳಲ್ಲಿ ಕೋಟೆ ಕಾಳಗಗಳಿಗಿಂತ ಅಧಿಕವಾಗಿ ಗುಡ್ಡಗಾಡು ಕಾಳಗ ಮತ್ತು ಬಯಲು ಯುದ್ಧಗಳನ್ನು ಕೈಗೊಂಡಿದ್ದಾರೆಂಬುದು ಹಸ್ತ ಪ್ರತಿಗಳಲ್ಲಿ ಉಲ್ಲೇಖಿಸಲಾಗಿದೆ. ಆಡಳಿತದಲ್ಲಿ ಕೋಟೆ–ಕೊತ್ತಲಗಳು, ಬೇಟೆ ಮಹಲುಗಳು, ಕಾವಲು ಗೋಪುರಗಳ ನಿರ್ಮಾಣವು ಐತಿಹಾಸಿಕ ಪದ್ದತಿಯಾದರೂ ವಿಜಯನಗರೋತ್ತರ ಅವಧಿಯಲ್ಲಿ ಇವುಗಳು ಸಂಸ್ಥಾನವನ್ನು ಕಾಪಾಡಿಕೊಳ್ಳುವಲ್ಲಿ ಆವಶ್ಯಕತೆಯ ಅಂಗವೆಂದು ಗುರುತಿಸಲಾಗಿದೆ. ಇಂತಹ ಅನಿವಾರ್ಯತೆಗೆ ಬಂದೂಕು ಮತ್ತು ಫಿರಂಗಿಗಳಂತ ಉಪಯೋಗವು ಕೂಡ ಕಾರಣವಾಗಿರುವುದು ಕಂಡುಬರುತ್ತದೆ. ಈ ರೀತಿಯ ಸಿಡಿಮದ್ದಿನ ಶಸ್ತ್ರಾಸ್ತ್ರಗಳ ಬಳಕೆಯಿಂದ ರಾಜ್ಯವನ್ನು ಸಂರಕ್ಷಿಸುವ ಅವಶ್ಯಕತೆಗಳು ಎದುರಾಗಿ ಕೋಟೆ–ಕೊತ್ತಲಗಳನ್ನು ಹೆಚ್ಚಿನ ಸಂಕೆಯಲ್ಲಿ ಕಟ್ಟಿಸಲು ದಾರಿಯಾಯಿತು. ಈ ಕಾರಣಗಳಿಂದ ಸುರಪುರ ಸಂಸ್ಥಾನದ ನಾಯಕರು ಮತ್ತು ಅಧಿನ ಬೇಡ, ಗುರಿಕಾರ ಮತ್ತು ಕೂಟಗಾರ ಸೈನಿಕ ಪಡೆಗಳು ನಾಲ್ಕು ದಿಕ್ಕುಗಳಲ್ಲಿ ಕಂಡುಬರುವ ಕೋಟೆ–ಕೊತ್ತಲಗಳನ್ನು ಆಧುನಿಕ ಆಯುಧಗಳಾದ ಬಂದೂಕು, ಫಿರಂಗಿ ಗುಂಡುಗಳ ಆಕ್ರಮಣಕ್ಕೆ ಒಳಗಾಗದಂತಹ ಭದ್ರವಾದ ಕೋಟೆಗಳನ್ನು ನಿರ್ಮಿಸಿರುವುದು ಸುರಪುರ ಸಂಸ್ಥಾನ ಮಾತ್ರವಲ್ಲದೆ ಸಗರನಾಡಿನ ಜೊತೆಗೆ ಹೋರ ರಾಜ್ಯಗಳಲ್ಲಿ ಇವರ ನಿರ್ಮಾಣದ ಪ್ರಾಚ್ಯವಶೇಷಗಳು ಇಂದಿಗೂ ಕಂಡುಬರುತ್ತದೆ.

ಹಿಂಸೆಗಳು ಹಿಂಸೆಯನ್ನು ಪೋಷಿಸುತ್ತವೆ, ಮೈತ್ರಿಗಳು ಸಂಬಂಧಗಳನ್ನು ಕೊನೆಯವರೆಗೆ ಮುಂದುವರೆಸುತ್ತವೆ ಎಂಬ ತತ್ವವನ್ನು ಸುರಪುರದ ನಾಯಕರು ಪಾಲಿಸುತ್ತಿದ್ದರು. ಈ ಸಿದ್ಧಾಂತಕ್ಕೆ ಪೂರಕವಾಗಿ ಆರಂಭದಲ್ಲಿ ವಿಜಯಪುರದ ಮೊಹಮ್ಮದ ಆದಿಲ್‌ಶಾಹನೊಂದಿಗೆ ಮತ್ತು ಅನಂತರದಲ್ಲಿ ಹೈದ್ರಾಬಾದ್ ನಿಜಾಮನೊಂದಿಗೆ ಅನುಸರಿಸಿದಂತ ಸ್ನೇಹ ಸಂಬಂಧಗಳು ಇವರ ಆಡಳಿತಕ್ಕೆ ಸಾಕ್ಷಿಯಾಗುತ್ತವೆ. ವಾಗಣಗೇರಿ ಕೋಟೆಯ ಮೇಲೆ ನಿರಂತರ ನಡೆದ ಮೊಗಲ ಸರದಾರರ ಮತ್ತು ಔರಂಗಜೇಬನ ದಾಳಿಗಳುನ್ನು ತಡೆಹಿಡಿಯಲು ಈ ಎರಡು ಮನೆತನಗಳ ಮಧ್ಯೆ ಸಂಭವಿಸಿದ ಯುದ್ಧಗಳ ಕಾಲಾನುಕ್ರಮವು ಈ ಸಂಗತಿಯನ್ನು ಬಲಗೊಳಿಸುತ್ತದೆ.

